# ಕ್ರಿಯೇಟಿವ್ ನಿನಾದ

CREATIVE
EDUCATION FOUNDATION MOODBIDRI (R)

ಮಾರ್ಚ್ - ಮೇ 2023

ತ್ರೈಮಾಸಿಕ ಪತ್ರಿಕೆ | ಕ್ರಿಯಾಶೀಲ ಮನಸ್ಸುಗಳಿಗಾಗಿ... | ಸಂಪುಟ 1 ಸಂಚಿಕೆ 4


## ಸ|ರಿ|ಗ|ಮ|ಪ|ದ|ನಿ

## ಕಾರ್ಕಳ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನಕ್ಕೆ ರಾಷ್ಟ್ರಮಟ್ಟದ "ಆದಿಗ್ರಾಮೋತ್ಸವ" ಪುರಸ್ಕಾರ



(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)

ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಕೊಡಮಾಡಲಾಗುವ "ಶಿಕ್ಷಣ ಸಿರಿ" ಪುರಸ್ಕಾರಕ್ಕೆ ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಪಾತ್ರವಾಗಿದೆ. ಕಲೆ–ಸಾಂಸ್ಕೃತಿಕ ಚಟುವಟಿಕೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಮಾಜಮುಖಿ ಚಿಂತನೆಗಳಿಂದ ಕಾರ್ಯನಿರ್ವಹಿಸುತ್ತಿರುವ ವಿಶೇಷ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಅಜೆಕಾರಿನ ಡಾ. ಶೇಖರ್ ಅವರ ನೇತೃತ್ವದಲ್ಲಿ ಆದಿಗ್ರಾಮೋತ್ಸವ 'ಶಿಕ್ಷಣ ಸಿರಿ' ರಾಷ್ಟ್ರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಅನುಕೂಲವಾಗುವಂತೆ ಹಿರ್ಗಾನದ ಹಳ್ಳಿಯಲ್ಲಿ ಸುಸಜ್ಜಿತ ವ್ಯವಸ್ಥೆಯಡಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಮತ್ತು ಶೈಕ್ಷಣಿಕವಾಗಿ ಅಪೂರ್ವ ಸಾಧನೆಗೈದ ಕಾರಣಕ್ಕಾಗಿ 24 ನೇ ಆದಿಗ್ರಾಮೋತ್ಸವದ 4ನೇ ಗ್ರಾಮಸಾಹಿತ್ಯ ಸಮ್ಮೇಳನದಲ್ಲಿ ಅಜೆಕಾರು ಸೇಕ್ರೆಡ್ ಹಾರ್ಟ್ ಚರ್ಚ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.



**ಸಂಸ್ಥಾಪಕರು**
ಕ್ರಿಯೇಟಿವ್ ಶಿಕ್ಷಣ ಸಂಸ್ಥೆಗಳು ಕಾರ್ಕಳ, ಉಡುಪಿ ಜಿಲ್ಲೆ

## ಕಾರ್ಕಳ ಕ್ರಿಯೇಟಿವ್ ಪ.ಪೂ ಕಾಲೇಜಿಗೆ ಶೇ. 100 ಫಲಿತಾಂಶ

(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)

ದ್ವಿತೀಯ ಪಿಯುಸಿಯಲ್ಲಿ ರಾಜ್ಯದ ಹತ್ತು ರ್‍ಯಾಂಕ್‌ನ ಒಳಗಡೆ ಕಾಲೇಜು ಏಳು ರ್‍ಯಾಂಕ್ ಪಡೆಯುವುದರ ಮೂಲಕ 2022–23ನೇ ಶೈಕ್ಷಣಿಕ



ಕುಮಾರಿ ಅನಘ



ಸುಮಂತ್ ಶೆಟ್ಟಿ



ಆದಿತ್ಯ ಹೊಳ್ಳ



ಅಭಯ್ ಎಸ್.ಎಸ್



ಜಾಗೃತಿ ಕೆ.ಪಿ



ಅಕ್ಷತಾ ಆರ್.ಪೈ

ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಕಾರ್ಕಳ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿಗೆ ಸತತ ಎರಡನೇ ವರ್ಷವೂ ಶೇ. 100 ಫಲಿತಾಂಶ ದೊರಕಿದೆ. ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲೇ ತೇರ್ಗಡೆ ಹೊಂದುವ ಮೂಲಕ ವಿಶೇಷ ಸಾಧನೆಗೈದಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಾದ ಪ್ರಸ್ತುತ್ ಪಟೇಲ್ 592 ಅಂಕಗಳೊಂದಿಗೆ ರಾಜ್ಯಕ್ಕೆ 5ನೇ ರ್‍ಯಾಂಕ್, ಸುಮಂತ್ ಶೆಟ್ಟಿ 591 ಅಂಕಗಳೊಂದಿಗೆ ರಾಜ್ಯಕ್ಕೆ 6ನೇ ರ್‍ಯಾಂಕ್, ಆದಿತ್ಯ ಹೊಳ್ಳ 588, ಅಭಯ್ ಎಸ್. ಎಸ್. 588 ಅಂಕಗಳೊಂದಿಗೆ ರಾಜ್ಯಕ್ಕೆ 9ನೇ ರ್‍ಯಾಂಕ್, ಜಾಗೃತಿ ಕೆ. ಪಿ. 587 ಅಂಕಗಳೊಂದಿಗೆ ರಾಜ್ಯಕ್ಕೆ 10ನೇ ರ್‍ಯಾಂಕ್ ಗಳಿಸಿದ್ದಾರೆ. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾದ ಕುಮಾರಿ ಅನಘ 595 ಅಂಕಗಳೊಂದಿಗೆ ರಾಜ್ಯಕ್ಕೆ 3ನೇ ಸ್ಥಾನ, ದಿವಿತ್ ಪಿ. ಗೌಡ 590 ಅಂಕಗಳೊಂದಿಗೆ ರಾಜ್ಯಕ್ಕೆ 8ನೇ ಸ್ಥಾನ ಹಾಗೂ ಕುಮಾರಿ ಅಕ್ಷತಾ ಆರ್.ಪೈ 588 ಅಂಕಗಳೊಂದಿಗೆ ರಾಜ್ಯಕ್ಕೆ 10ನೇ ಸ್ಥಾನ ಗಳಿಸಿದ್ದಾರೆ. ಒಟ್ಟು ಪರೀಕ್ಷೆಗೆ ಹಾಜರಾದ 380 ವಿದ್ಯಾರ್ಥಿಗಳಲ್ಲಿ, 67 ವಿದ್ಯಾರ್ಥಿಗಳು 95 ಶೇಕಡಾ ಕ್ಕಿಂತ ಅಧಿಕ, 211 ವಿದ್ಯಾರ್ಥಿಗಳು 90 ಶೇಕಡಾಕ್ಕಿಂತ ಅಧಿಕ, 298 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ ಉಳಿದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ.

ಭೌತಶಾಸ್ತ್ರ 16, ರಸಾಯನಶಾಸ್ತ್ರ 02, ಗಣಿತ 34, ಜೀವಶಾಸ್ತ್ರ 03, ಅರ್ಥಶಾಸ್ತ್ರ 03, ಗಣಕ ವಿಜ್ಞಾನ 117, ವ್ಯವಹಾರ ಅಧ್ಯಯನ 14, ಲೆಕ್ಕಶಾಸ್ತ್ರ 10, ಕನ್ನಡ 01, ಸಂಸ್ಕೃತದಲ್ಲಿ 19 ವಿದ್ಯಾರ್ಥಿಗಳು ವಿಷಯವಾರು ನೂರಕ್ಕೆ ನೂರು ಅಂಕ ಗಳಿಸಿ ವಿಶೇಷ ಸಾಧನೆಗೈದಿದ್ದಾರೆ.

## ಕ್ರಿಯೇಟಿವ್‌ನ ಮೂರು ವಿದ್ಯಾರ್ಥಿಗಳು ಎನ್.ಡಿ.ಎ. ಗೆ ಆಯ್ಕೆ

(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)

ಕೇಂದ್ರ ಲೋಕಸೇವಾ ಆಯೋಗ (UPSC) ಎಪ್ರಿಲ್ 16, 2023 ರಲ್ಲಿ ನಡೆಸಿದ ಅತ್ಯಂತ ಕಠಿಣಕರವಾದ ರಾಷ್ಟ್ರಮಟ್ಟದ ಎನ್.ಡಿ.ಎ/ಎನ್.ಎ ಅರ್ಹತಾ ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಪ.ಪೂ ಕಾಲೇಜಿನ 03 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಪುಣೆಯ ಖಡಕ್‌ವಾಸ್ಲದಲ್ಲಿರುವ NDA ತರಬೇತಿ ಸಂಸ್ಥೆಯಲ್ಲಿ ಬಿ.ಟೆಕ್ ಅಥವಾ ಬಿ.ಎಸ್.ಸಿ ಪದವಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗಾಗಿ ನಡೆಯುವ ಪರೀಕ್ಷೆಗೆ ದೇಶದಾದ್ಯಂತ ಸುಮಾರು 2.24 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದು, ಅದರಲ್ಲಿ 7,964 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಮುಂದಿನ ಹಂತದಲ್ಲಿ



ರಾಮಕುಮಾರ್ ಬಾಬು ಬರ್ಗಿ



ಜಾಗೃತಿ ಕೆ.ಪಿ



ಪ್ರಣವ್ ಪಿ ಸಂಜಿ

ನಡೆಯುವ ಎಸ್.ಎಸ್.ಬಿ ( ಸರ್ವಿಸ್ ಸೆಲೆಕ್ಷನ್ ಬೋರ್ಡ್ ) ಸುತ್ತಿಗೆ ಭಾಗವಹಿಸುವ ಅರ್ಹತೆ ಪಡೆದಿದ್ದಾರೆ.

ವಿದ್ಯಾರ್ಥಿಗಳಾದ ರಾಮಕುಮಾರ್ ಬಾಬು ಬರ್ಗಿ, ಜಾಗೃತಿ ಕೆ.ಪಿ, ಪ್ರಣವ್ ಪಿ. ಸಂಜಿ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಮೂಲಕ ಮುಂದಿನ ಹಂತದ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ.

## ದ್ವಿತೀಯ ಪಿಯುಸಿಯಲ್ಲಿ ರಾಜ್ಯಕ್ಕೆ 5 ಹಾಗೂ 8ನೇ ಸ್ಥಾನ
## ಹೆಚ್. ಕೆ. ಎಸ್. ಪ.ಪೂ. ಕಾಲೇಜಿಗೆ ಶೇಕಡಾ ನೂರು ಫಲಿತಾಂಶ

(ಕ್ರಿಯೇಟಿವ್ ಮೀಡಿಯಾ : ಹಾಸನ)

2022– 2023 ನೇ ಸಾಲಿನ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಶೇಕಡಾ 100 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಪ್ರಸ್ತುತ್ ಪಟೇಲ್ 592 ಅಂಕಗಳೊಂದಿಗೆ ರಾಜ್ಯಕ್ಕೆ ಐದನೇ ಸ್ಥಾನ ಪಡೆದುಕೊಂಡಿದ್ದಾರೆ. ಸಂಸ್ಕೃತ ಭಾಷೆ ಹಾಗೂ ಪಿ. ಸಿ. ಎಂ. ಸಿ ವಿಷಯಗಳಲ್ಲಿ 100ಕ್ಕೆ 100 ಅಂಕಗಳೊಂದಿಗೆ ಒಟ್ಟು 592 ಅಂಕ ಗಳನ್ನು ಪಡೆದು ಕೊಂಡಿರುವುದು ವಿಶೇಷ ಸಾಧನೆಯಾಗಿದೆ. ರಾಜ್ಯಕ್ಕೆ 5ನೇ ಸ್ಥಾನ ಪಡೆಯುವುದರ ಜೊತೆಗೆ ಹಾಸನ ಜಿಲ್ಲೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.



ಪ್ರಸ್ತುತ್ ಪಟೇಲ್



ದಿವಿತ್ ಪಿ. ಗೌಡ

ವಾಣಿಜ್ಯ ವಿಭಾಗದಲ್ಲಿ ದಿವಿತ್ ಪಿ. ಗೌಡ ನಾಲ್ಕು ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದು ಕೊಳ್ಳುವುದರ ಮೂಲಕ ಒಟ್ಟು 590 ಅಂಕಗಳನ್ನು ಪಡೆದು ರಾಜ್ಯಕ್ಕೆ 8ನೇ ಸ್ಥಾನ ಪಡೆದುಕೊಂಡಿದ್ದಾರೆ..

ವಿಜ್ಞಾನ ವಿಭಾಗದಲ್ಲಿ ಚಂದನ ಹೆಚ್. ಎಂ. 586, ಆಯುಷ್ ಎಂ. ಎಸ್. 585, ಪ್ರಣವ್ ಪಿ. ಸಂಜೀ 584, ಪುಣ್ಯ ಆರ್. 583, ಚಮನ್ ಜಿ. 583, ಕುಶಾಲ್ ಡಿ. 583 ಗರಿಷ್ಠ ಅಂಕಗಳನ್ನು ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ನಿಧಿ ಕೊಟ್ಟಾರಿ 583, ಖುಶಿ ಎನ್. 581, ಮಹಮ್ಮದ್ ಇಜಾನ್ ಖಾನ್ 580, ಸುಪ್ರಸಿದ್ಧ್ ಕಾಂತ್ 577 ಗರಿಷ್ಠ ಅಂಕಗಳನ್ನು ಪಡೆದು ಕೊಂಡಿದ್ದಾರೆ.

ಪರೀಕ್ಷೆ ಬರೆದ ಒಟ್ಟು 155 ವಿದ್ಯಾರ್ಥಿಗಳಲ್ಲಿ 110 ವಿದ್ಯಾರ್ಥಿ ಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 42 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವುದು ವಿಶೇಷ ಸಾಧನೆಯಾಗಿದೆ. ರಾಜ್ಯದಲ್ಲೇ ಶೇಕಡಾ ನೂರು ಫಲಿತಾಂಶ ಪಡೆದಿರುವ ಕೆಲವೇ ಕಾಲೇಜುಗಳಲ್ಲಿ ಹೆಚ್. ಕೆ.ಎಸ್. ಪಿ ಯು ಕಾಲೇಜು ಕೂಡಾ ಒಂದಾಗಿದೆ.






**ಕಾವ್ಯೋಕ್ತಿ** | ಉದಯದೊಳೇನ್ ಹೃದಯವ ಕಾಣ್, ಅದೆ ಅಮೃತದ ಹಣ್ಣೊ, ಶಿವನಿಲ್ಲದ ಕವಿ ಕುರುಡನೊ, ಕವಿ ಕಾವ್ಯದ ಕಣ್ಣೊ – ಕುವೆಂಪು



**ಕ್ರಿಯೇಟಿವ್ ನಿನಾದ**

ಪ್ರಕಟಣೆ
ಕ್ರಿಯೇಟಿವ್ ಎಜುಕೇಶನ್ ಫೌಂಡೇಶನ್ ಮೂಡುಬಿದಿರೆ(ರಿ.)
ಕಾರ್ಕಳ, ಹಾಸನ, ಉಡುಪಿ

ಪ್ರತಿಗಳಿಗಾಗಿ : +919019844492
ಇ–ಮೇಲ್: ninada@creativeedu.in

ಕ್ರಿಯೇಟಿವ್ ನಿನಾದ ಬಳಗ

**ಗೌರವ ಸಂಪಾದಕರು**
ವಿದ್ವಾನ್ ಗಣಪತಿ ಭಟ್
ಡಾ. ಗಣನಾಥ ಶೆಟ್ಟಿ
ಅಮೃತ್ ರೈ
ಆದರ್ಶ ಎಂ.ಕೆ
ವಿಮಲ್ ರಾಜ್ ಜಿ.
ಗಣಪತಿ ಕೆ.ಎಸ್

**ಪ್ರಧಾನ ಸಂಪಾದಕರು**
ಅಶ್ವತ್ ಎಸ್.ಎಲ್.

**ಸಂಪಾದಕರು**
ರಾಘವೇಂದ್ರ ಬಿ.ರಾವ್ (ಅನು ಬೆಳ್ಳೆ)
ರಾಜೇಶ್ ಶೆಟ್ಟಿ

**ಸಲಹಾ ಮಂಡಳಿ**
ಕಾರ್ಕಳ ● ರಾಮಕೃಷ್ಣ ಹೆಗಡೆ, ಶಿವಕುಮಾರ್, ವಿನಾಯಕ ಜೋಗ್, ಮಹೇಶ್ ಶೆಣೈ, ಉಮೇಶ್ ಕೆ., ಆಶನ್ ಗೌಡ, ಪ್ರೇರಣಾ ನರೇಶ್ ಬಿ.ಆರ್
ಹಾಸನ ● ಮಹೇಶ್, ಸತೀಶ್ ಆಚಾರ್ಯ, ರಮೇಶ್, ವಿಘ್ನೇಶ್ ಕಾಮತ್
ಉಡುಪಿ ● ಸ್ಟ್ಯಾನಿ ಲೋಬೋ, ಸಂತೋಷ್

## ಸಂಪಾದಕೀಯ...

**ಆನೋ ಭದ್ರಾಃ ಕೃತವೋ ಯಂತು ವಿಶ್ವತಃ**

ವಿದ್ಯಾರ್ಥಿ ಜೀವನದಲ್ಲೇ ಅತ್ಯಂತ ಮಹತ್ತರವಾದ ಪಿ.ಯು. ಶಿಕ್ಷಣದ ಯಶಸ್ಸು ಅವರ ಬದುಕಿನ ದಿಕ್ಕನ್ನು ನಿರ್ಧರಿಸುವ ಅತೀ ಮುಖ್ಯ ಘಟ್ಟ.

ಮಹತ್ತರ ಕನಸುಗಳನ್ನು ಹೊತ್ತು ಪಿಯುಸಿಗೆ ಬರುವ ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರವಾಗುವುದು ಸ್ಪರ್ಧಾತ್ಮಕ ಪರೀಕ್ಷೆಗಳಿಂದ. ಈ ಪರೀಕ್ಷೆಗಳೇನು ಸುಲಭ ಸಾಧ್ಯವಾದುದಲ್ಲ. ಒಂದಕ್ಕಿಂತ ಒಂದು ಕಠಿಣ ಸವಾಲಿನ ಪರೀಕ್ಷೆಗಳು. ಈ ಮಧ್ಯೆ ಪಾಲಕರ ಅತಿಯಾದ ನಿರೀಕ್ಷೆಗಳು, ವಿಜ್ಞಾನ ವಿಭಾಗ ಆರಿಸಿಕೊಂಡರೆ ವೈದ್ಯನೇ ಆಗಬೇಕು ಇಲ್ಲವಾದರೆ ಐಐಟಿಗೆ ಆಯ್ಕೆ ಆಗಬೇಕು, ವಾಣಿಜ್ಯ ವಿಭಾಗವಾದರೆ ಸಿ.ಎ ಆಗಲೇಬೇಕೆಂಬ ಹಂಬಲ. ಅತೀ ಹೆಚ್ಚು ಪಠ್ಯಕ್ರಮವಿರುವ ಪಿ.ಯು.ಸಿ ಯಲ್ಲಿ ಸಹಜವಾಗಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಿರಂತರ ಒತ್ತಡವನ್ನು ತರುತ್ತದೆ. ಇತ್ತೀಚಿಗಿನ ದಿನಗಳಲ್ಲಿ ಪಾಲಕರು ಮಕ್ಕಳ ಮೇಲೆ ಇಡುವ ಅತಿಯಾದ ವಾತ್ಸಲ್ಯ, ಕರುಣೆ, ಸೋಲನ್ನು ಮೆಟ್ಟಿ ನಿಲ್ಲುವ ಆತ್ಮವಿಶ್ವಾಸವನ್ನು ಕಡಿಮೆಯಾಗಿಸಿದೆ. ಇಂತಹ ಕಾಲಘಟ್ಟದಲ್ಲಿ ಮಕ್ಕಳ ಸಾಮರ್ಥ್ಯಕ್ಕೆ ಬಲಿಷ್ಠ ರೆಕ್ಕೆ ಕಟ್ಟಿ, ಗೆಲುವಿನ ದಾರಿ ತಲುಪಿಸುವಲ್ಲಿ ಶಿಕ್ಷಕರ, ಶಿಕ್ಷಣ ಸಂಸ್ಥೆಗಳ ಪಾತ್ರ ಬಹಳ ಪ್ರಮುಖವಾದದ್ದು. ಒತ್ತಡದಿಂದಾಚೆಗೆ ಅವರಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರತಂದು, ಮಾನಸಿಕವಾಗಿ ಸಮರ್ಥರನ್ನಾಗಿಸಿ ಯಶಸ್ಸಿನ ದಾರಿ ತಲುಪಿಸುವ ಜೊತೆಗೆ ಕಲಿಕೆ ಕೇವಲ ಜ್ಞಾನವನ್ನಷ್ಟೇ ಬಿತ್ತರಿಸದೆ ಅದರಾಚೆಗಿನ ವಿವೇಚನೆಯನ್ನು, ಪ್ರತಿ ವಿಚಾರವನ್ನೂ ಅವಲೋಕಿಸುವ ತರ್ಕವನ್ನು, ಪ್ರಸ್ತುತ ಪಡಿಸುವ ಕ್ರೀಯಾಶೀಲತೆಯನ್ನು ಕಲಿಸಿಕೊಡುವ ಅನಿವಾರ್ಯತೆ ಇದೆ. ಅದರಂತೆ ಕ್ರಿಯೇಟಿವ್ ಶಿಕ್ಷಣ ಸಂಸ್ಥೆ ಈ ಎಲ್ಲಾ ಧ್ಯೇಯಗಳೊಂದಿಗೆ ವಿದ್ಯಾರ್ಥಿಗಳಲ್ಲಿ ಸದಾ ಮನೋಸ್ಥೈರ್ಯ ತುಂಬುವ ಜೊತೆ ಯಶಸ್ಸಿನೆಡೆಗೆ ತಲುಪಿಸುವ ಕಾರ್ಯ ನಿರಂತರ ಮಾಡುತ್ತಿದೆ.

ಕಳೆದ ಎರಡು ವರ್ಷಗಳಿಂದ ಸಂಸ್ಥೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಅತ್ಯುತ್ತಮ ಫಲಿತಾಂಶ ಗಳಿಸುವ ಮೂಲಕ ಅತ್ಯಂತ ಕಡಿಮೆ ಸಮಯದಲ್ಲಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬಾರಿಯ ನಿನಾದ ಸಂಚಿಕೆಯಲ್ಲಿ ಎಂದಿನಂತೆ ನವ ಪ್ರತಿಭೆಗಳ ಸಾಹಿತ್ಯದ ಹೂರಣದೊಂದಿಗೆ ಫಲಿತಾಂಶದ **ವಿಶೇಷ ಪುರವಣಿ**ಯನ್ನು ನಿಮ್ಮ ಕೈಗಿಡುತ್ತಿದ್ದೇವೆ. ಆನೋ ಭದ್ರಾಃ ಕೃತವೋ ಯಂತು ವಿಶ್ವತಃ ಗೀತೆಯ ಸಾಲಿನಂತೆ ನಮ್ಮ ವಿದ್ಯಾರ್ಥಿಗಳ ಸಾಧನೆಯ ಸಂಪೂರ್ಣ ಚಿತ್ರಣದ ಈ ಪುರವಣಿ ಹೊಸ ಸಾಧಕರಿಗೆ ಉತ್ಸುಕತೆ ತರಲೆಂದು, ಸದಾ ಎಲ್ಲ ದಿಕ್ಕುಗಳಿಂದಲೂ ನಮ್ಮೆಡೆಗೆ ಸದ್ವಿಚಾರಗಳು ಹರಿದು ಬರಲೆಂದು ಆಶಿಸುತ್ತಾ...



**ಅಶ್ವತ್ ಎಸ್.ಎಲ್.**
**ಪ್ರಧಾನ ಸಂಪಾದಕರು,**
ಕ್ರಿಯೇಟಿವ್ ನಿನಾದ, ಕಾರ್ಕಳ

# ಜಗತ್ತು ವಿಶೇಷ ಪ್ರತಿಭೆಗಳನ್ನು ಗುರುತಿಸುತ್ತದೆ

## ಜೆಸಿಐ ರಾಷ್ಟ್ರೀಯ ತರಬೇತುದಾರ ಕೆ. ರಾಜೇಂದ್ರ ಭಟ್

**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

ವಿಶೇಷ ಪರಿಶ್ರಮದಿಂದ ಕೂಡಿದ ಪ್ರಯತ್ನ ಯಶಸ್ಸನ್ನು ದೊರಕಿಸಿಕೊಡುತ್ತದೆ. ತನ್ಮೂಲಕ ವಿಶ್ವವ್ಯಾಪಿಯನ್ನಾಗಿಸಿ ಪ್ರಪಂಚವನ್ನು ಆಳಲು ತೊಡಗುತ್ತದೆ. ಆದ್ದರಿಂದ ಕ್ರಿಯಾಶೀಲತೆಯೇ ಇಂದಿನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಎಂದು ಜೆಸಿಐ ರಾಷ್ಟ್ರೀಯ ತರಬೇತುದಾರ, ಖ್ಯಾತ ವಾಗ್ಮಿ ಕೆ. ರಾಜೇಂದ್ರ ಭಟ್ ನುಡಿದರು. ಅವರು ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಾಹಿತ್ಯ ಸಾಂಗತ್ಯ ಸರಣಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. ಸಾಧನೆಯ ಕಡೆಗೆ ತುಡಿತ, ಅವಕಾಶವನ್ನು ಸೃಷ್ಟಿಸುವುದು ನಮ್ಮ ಗುರಿಯಾಗಬೇಕೆಂದು ಕರೆ ನೀಡಿದರು.

ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿ ಸಾಹಿತ್ಯ ಭಾವನಾತ್ಮಕ ವಿಷಯ, ಸಾಹಿತ್ಯದ ಜೊತೆ ಜೊತೆಗೆ ಭಾವನೆಗಳೊಂದಿಗೆ ಬದುಕಬೇಕಾಗಿದೆ ಎಂದು ನುಡಿದರು. ಈ ಸಂದರ್ಭದಲ್ಲಿ "ಓಲಿಂಪಿಯಾಡ್" ಪರೀಕ್ಷೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಪದಕ ನೀಡಿ




ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕ ವರ್ಗದವರು, ಉಪನ್ಯಾಸಕೇತರ ಬಳಗದವರು, ಪಿ ಆರ್ ಓ ಲಿಶನ್ ಗೌಡ, ಆಡಳಿತಾಧಿಕಾರಿ ಜಯಪ್ರಕಾಶ್ ಶೆಟ್ಟಿ ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕರಾದ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# NATA ಪರೀಕ್ಷೆಯಲ್ಲಿ ಕ್ರಿಯೇಟಿವ್ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಆರ್ಕಿಟೆಕ್ಚರ್ ಇಂಜಿನಿಯರಿಂಗ್‌ಗೆ ಸೇರಬಯಸುವ ವಿದ್ಯಾರ್ಥಿಗಳಿಗಾಗಿ ಎಪ್ರಿಲ್ 2023 ರಲ್ಲಿ ನಡೆದ ಪ್ರಥಮ ಹಂತದ NATA ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಪ.ಪೂ ಕಾಲೇಜಿನ ವಿದ್ಯಾರ್ಥಿಗಳಾದ ವರುಣ್ ಜಿ. ನಾಯಕ್ 127, ದೀಕ್ಷಾ ಪಾಂಡು 123, ಸ್ಪರ್ಶ ಪಾರ್ಶ್ವನಾಥ್ 119, ಧರಿನಾಥ್ ಕುಂಬಾರ್ 118, ಸಹನಾ ಎನ್. ಸಿ. 116 ಅಂಕ ಗಳಿಸಿದ್ದಾರೆ.

NATA ಪರೀಕ್ಷೆಗೆ ಹಾಜರಾದ 31 ವಿದ್ಯಾರ್ಥಿಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿರುತ್ತಾರೆ. ವಿದ್ಯಾರ್ಥಿಗಳಾದ ಅನ್ವಿತಾ ಕೆ, ಸ್ವಸ್ತಿಕ್ ಕೆ. ಭಟ್, ಅನುಷಾ ಐನಾಪುರ, ಸಂತೃಪ್ತಿ, ಚಿರಾಗ್ ವಿ.ಶೆಟ್ಟಿ, ಗುರುಲಿಂಗಯ್ಯ ಎಸ್ ಕಂಬಳಿಮಠ್, ಶ್ರವಣ್ ಎಸ್, ಸಂಜಯ್ ಎಸ್, ಪಂಕಜ್ ಜೈ ಪ್ರಸಾದ್, ಪ್ರೇಕ್ಷಾ, ನೇಹಾ ಮಯ್ಯ, ಪನ್ವಿತ್ ಜಿ.ಎನ್, ಚಿನ್ಮಯಿ


ಸ್ಪರ್ಶ ಪಾರ್ಶ್ವನಾಥ್


ಧರಿನಾಥ್ ಕುಂಬಾರ್


ಸಹನಾ ಎನ್.ಸಿ

ಎಸ್.ಶೆಟ್ಟಿ ಇವರು ಉತ್ತಮ ಅಂಕಗಳಿಸಿರುತ್ತಾರೆ.

ಕ್ರಿಯೇಟಿವ್ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪಿಯುಸಿ ಪ್ರಥಮ ವರ್ಷದಿಂದಲೇ ವಿವಿಧ ಕೋರ್ಸ್ ಗಳಿಗೆ ಕ್ರಿಯೇಟಿವ್ ಲರ್ನಿಂಗ್ ಕ್ಲಾಸಸ್ ನಡಿಯಲ್ಲಿ ತರಬೇತಿ ನೀಡಲಾಗುತ್ತಿದೆ.

# ಸಿ.ಎ (CA) ಫೌಂಡೇಶನ್ ಪರೀಕ್ಷೆಯಲ್ಲಿ ದೀಕ್ಷಾ ಆಚಾರ್ಯ ಹಾಗೂ ಶ್ರಾವ್ಯಾ ಸಿ.ಎಸ್ ಉತ್ತೀರ್ಣ


ದೀಕ್ಷಾ ಆಚಾರ್ಯ


ಶ್ರಾವ್ಯಾ ಸಿ.ಎಸ್

**ಕಾರ್ಕಳ:** ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ಆಫ್ ಇಂಡಿಯಾ(ICAI) ಡಿಸೆಂಬರ್ ತಿಂಗಳಿನಲ್ಲಿ ನಡೆಸಿದ ಸಿ.ಎ ಫೌಂಡೇಶನ್ ಪರೀಕ್ಷೆಯಲ್ಲಿ ದೀಕ್ಷಾ ಆಚಾರ್ಯ ಮತ್ತು ಶ್ರಾವ್ಯಾ ಸಿ.ಎಸ್ ಉತ್ತಮ ಅಂಕಗಳನ್ನು ಗಳಿಸಿ ಉತ್ತೀರ್ಣರಾಗಿದ್ದಾರೆ. ಕ್ರಿಯೇಟಿವ್ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಥಮ ಪಿ.ಯು.ಸಿ ಯಿಂದಲೇ ಸಿ.ಎ ಮತ್ತು ಸಿ.ಎಸ್.ಇ.ಇ.ಟಿ ಹಾಗೂ CLAT ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.

# ಕ್ರಿಯೇಟಿವ್ ಕಾಲೇಜಿನ ವಿದ್ಯಾರ್ಥಿಗಳಿಂದ JEE B. Arch ನಲ್ಲಿ ಉತ್ತಮ ಸಾಧನೆ


ಕು. ದೀಕ್ಷಾ ಪಾಂಡು


ಸ್ವಸ್ತಿಕ್ ಕೆ ಭಟ್


ವರುಣ್ ಜಿ ನಾಯಕ್

ಕಾರ್ಕಳದ ಕ್ರಿಯೇಟಿವ್ ಪ. ಪೂ ಕಾಲೇಜಿನ ವಿದ್ಯಾರ್ಥಿಗಳು ಜನವರಿ ತಿಂಗಳಿನಲ್ಲಿ ನ್ಯಾಷನಲ್ ಎಜೆನ್ಸಿ ನಡೆಸಿದ ಜಂಟಿ ಪ್ರವೇಶ ಪರೀಕ್ಷೆ–ಮುಖ್ಯ (ಜೆಇಇ–ಮೈನ್) 2ಎ (ಆರ್ಕಿಟೆಕ್ಚರ್) ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸಿದ್ದಾರೆ.

ವಿದ್ಯಾರ್ಥಿಗಳಾದ ಕು. ದೀಕ್ಷಾ ಪಾಂಡು 95.8311 ಪರ್ಸಂಟೈಲ್, ಸ್ವಸ್ತಿಕ್ ಕೆ. ಭಟ್ 91.4659 ಪರ್ಸಂಟೈಲ್, ವರುಣ್ ಜಿ. ನಾಯಕ್ 86.1552 ಪರ್ಸಂಟೈಲ್ ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಯನ್ನು ಕ್ರಿಯೇಟಿವ್ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಪರೀಕ್ಷಾ ಸಂಯೋಜಕ ಸುಮಂತ ದಾಮ್ಲೆ, ಉಪನ್ಯಾಸಕ ವರ್ಗದವರು ಅಭಿನಂದಿಸಿದ್ದಾರೆ.

ಇದು ಕ್ರಿಯೇಟಿವ್ ಕಾಲೇಜಿನ ಪ್ರಥಮ ವರ್ಷದಲ್ಲಿಯೇ ಅತ್ಯುತ್ತಮ ಫಲಿತಾಂಶಕ್ಕೆ ಸಾಕ್ಷಿಯಾಗಿದೆ.

# ಕಾರ್ಕಳ ಕ್ರಿಯೇಟಿವ್ ಪ.ಪೂ ಕಾಲೇಜಿನ ವಿದ್ಯಾರ್ಥಿಗಳಿಂದ ಜೆಇಇ ಮೈನ್ಸ್ ನಲ್ಲಿ ಉತ್ತಮ ಸಾಧನೆ


ಶ್ರೇಯಸ್ ಎಸ್. ಚಿಕಾಲೆ


ಜಾರ್ಜ್ ಜೋಸೆಫ್


ಸಾತ್ವಿಕ್ ಎಸ್. ಶೆಟ್ಟಿ

ಜನವರಿ ತಿಂಗಳಿನಲ್ಲಿ ನಡೆದ ರಾಷ್ಟ್ರ ಮಟ್ಟದ ಜೆಇಇ ಪ್ರಥಮ ಹಂತದ ಪರೀಕ್ಷೆಯಲ್ಲಿ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ 17 ವಿದ್ಯಾರ್ಥಿಗಳು 95 ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿ ಉತ್ತಮ ಸಾಧನೆಗೈದಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಾದ ಶ್ರೇಯಸ್ ಎಸ್ ಚಿಕಾಲೆ 97.6936, ಜಾರ್ಜ್ ಜೋಸೆಫ್ 97.6545, ಸಾತ್ವಿಕ್ ಎಸ್. ಶೆಟ್ಟಿ 97.3316 ಪರ್ಸಂಟೈಲ್ ಅಂಕ ಗಳಿಸಿದ್ದಾರೆ. 43 ವಿದ್ಯಾರ್ಥಿಗಳು 90ಕ್ಕಿಂತ ಅಧಿಕ ಪರ್ಸಂಟೈಲ್ , 66 ವಿದ್ಯಾರ್ಥಿಗಳು 85 ಕ್ಕಿಂತ ಹೆಚ್ಚು ಪರ್ಸಂಟೈಲ್ ಅಂಕ ಗಳಿಸಿದ್ದಾರೆ.

ಕಳೆದ ವರ್ಷ ನಡೆದ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿಯೂ ಉತ್ತಮ ಸಾಧನೆಗೈದ ಕ್ರಿಯೇಟಿವ್ ವಿದ್ಯಾರ್ಥಿಗಳಲ್ಲಿ ಕುಮಾರಿ ಅನ್ವಿನ್ ಬಿ.ಪಿ. ಪ್ರತಿಷ್ಠಿತ ಐಐಟಿ ಬಾಂಬೆಗೆ ಆಯ್ಕೆಯಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ವಿದ್ಯಾರ್ಥಿಗಳ ಈ ಅಮೋಘ ಸಾಧನೆಗೆ ಪ್ರಾಂಶುಪಾಲರು, ಆಡಳಿತ ಮಂಡಳಿ, ಜೆಇಇ ಸಂಯೋಜಕರಾದ ನಂದೀಶ್ ಹೆಚ್. ಬಿ, ಉಪನ್ಯಾಸಕ ಮತ್ತು ಉಪನ್ಯಾಸಕೇತರ ವೃಂದದವರು ಅಭಿನಂದಿಸಿದ್ದಾರೆ.

## ಕ್ರಿಯೇಟಿವ್ ಕಾಲೇಜಿನ ಇಶಾನ್ ಪಿ. ಸುಬ್ಬಾಪುರ್ ಮಠ್‌ಗೆ IIT ಪರೀಕ್ಷೆಯಲ್ಲಿ ರ್‍ಯಾಂಕ್


ಇಶಾನ್ ಪಿ. ಸುಬ್ಬಾಪುರ್ ಮಠ್

ವೃತ್ತಿ ಶಿಕ್ಷಣ ತರಬೇತಿ ನೀಡುವ ದೇಶದ ಪ್ರತಿಷ್ಠಿತ ವಿದ್ಯಾಸಂಸ್ಥೆ IIT ಬಾಂಬೆ ಯುವರು ನಡೆಸಿದ UCEED ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಇಶಾನ್ ಪಿ. ಸುಬ್ಬಾಪುರಮಠ್ 95.53 ಅಂಕ ಗಳಿಸಿ ಆಲ್ ಇಂಡಿಯಾ ರ್‍ಯಾಂಕಿಂಗ್ ನಲ್ಲಿ 1919 ನೇ ಸ್ಥಾನ ಪಡೆದಿರುತ್ತಾರೆ. IIT ಯಲ್ಲಿ ಡಿಸೈನ್ಸ್ ಕೋರ್ಸ್‌ನ ಪ್ರವೇಶಾತಿಗಾಗಿ ಜನವರಿ 2023 ರಲ್ಲಿ ನಡೆದ ಪರೀಕ್ಷೆಯಲ್ಲಿ ಇಶಾನ್ ಅತ್ಯುತ್ತಮ ಅಂಕಗಳಿಸುವ ಮೂಲಕ ಸಂಸ್ಥೆಗೆ ಮತ್ತು ಹೆತ್ತವರಿಗೆ ಕೀರ್ತಿ ತಂದಿರುತ್ತಾರೆ.

**ಕಾವ್ಯೋಕ್ತಿ** | ಹೆಣ್ಣು ಮುನಿದರೆ ನಾವು ತಿನಬೇಕು ಮಣ್ಣು, ಹೆಣ್ಣು ಅಂದರೆ ತಾಯಿ, ಜೀವನದ ತವರು – ದಿನಕರ ದೇಸಾಯಿ



## ಸಾಹಿತ್ಯಕ್ಕೆ ಭಾವನೆಗಳನ್ನು ಉದ್ದೀಪಿಸುವ ಶಕ್ತಿಯಿದೆ.

### – ಶ್ರೀ ಮುನಿರಾಜ ರೆಂಜಾಳ

**ಕಾರ್ಕಳ:** ಸಾಹಿತ್ಯ ಸರ್ವವ್ಯಾಪಿಯಾದುದು. ಸಾಹಿತ್ಯದ ರಸಭಾವಗಳನ್ನು ಅರಿತರೆ ಬದುಕಿನ ದಾರಿ ದೀಪವಾಗಬಲ್ಲದು. ಜೀವನದಲ್ಲಿ ನಾವು ಸಾಹಿತ್ಯ ಮತ್ತು ನೈತಿಕ ಮೌಲ್ಯಗಳಿಗೆ ತೆರೆದುಕೊಂಡಾಗ ಹೊಸ ದೃಷ್ಟಿ ಗೋಚರಿಸುತ್ತದೆ. ಮನಸ್ಸಿನ ತೃಪ್ತಿಗಾಗಿ ನಾವೆಲ್ಲ ಪುಸ್ತಕ ಪ್ರೀತಿಯನ್ನು, ಓದುವಿಕೆಯನ್ನು ಅಳವಡಿಸಿಕೊಳ್ಳಬೇಕಾಗಿದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯ ಮುನಿರಾಜ ರೆಂಜಾಳ ಅವರು ನುಡಿದರು. ಅವರು ಹಿರ್ಗಾನದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಾಹಿತ್ಯ ಸಾಂಗತ್ಯ ಸರಣಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ವಿದ್ಯಾರ್ಥಿಗಳು ಸುಂದರ ಭವಿಷ್ಯಕ್ಕಾಗಿ ಸತತ ಪ್ರಯತ್ನ ಮತ್ತು ಮೌಲಿಕ ಗ್ರಂಥಗಳ ಅಧ್ಯಯನ ನಡೆಸಬೇಕು. ರನ್ನ, ಪಂಪ, ನಾಗಚಂದ್ರ, ಕುವೆಂಪು, ಡಿ.ವಿ.ಜಿಯವರ ಸಾಹಿತ್ಯದ ಅಭ್ಯಾಸ ನಡೆಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕ್ರಿಯೇಟಿವ್, ಪ.ಪೂ ಕಾಲೇಜಿನ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್, ಸಂಸ್ಥಾಪಕರಾದ ಅಶ್ವತ್




ಎಸ್. ಎಲ್, ಉಪನ್ಯಾಸಕ ವೃಂದದವರು, ವಸತಿ ನಿಲಯ ಪಾಲಕರು, ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿಗಳು ಪಿ.ಆರ್.ಓ ಉಪಸ್ಥಿತರಿದ್ದರು. ಅಶ್ವತ್ ಎಸ್.ಎಲ್ ಪ್ರಾಸ್ತವಿಕ ನುಡಿಗಳೊಂದಿಗೆ ಸ್ವಾಗತಿಸಿದರು. ಉಪನ್ಯಾಸಕ ರಾಮಕೃಷ್ಣ ಹೆಗಡೆ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ಯುವಕರ ಕಣ್ಮಣಿ ನೇತಾಜಿ ಸುಭಾಶ್ಚಂದ್ರ ಬೋಸ್ ಜನ್ಮದಿನ ಆಚರಣೆ



**ಕಾರ್ಕಳ:** ಕ್ರಿಯೇಟಿವ್ ಪ.ಪೂ ಕಾಲೇಜಿನಲ್ಲಿ ನೇತಾಜಿ ಸುಭಾಶ್ಚಂದ್ರ ಬೋಸ್ ರವರ ಜಯಂತಿ ಅಧಿಕೃತವಾಗಿ "ಪರಾಕ್ರಮ್ ದಿವಸ್" ಆಚರಿಸಲಾಯಿತು.

## ಕಾಲೇಜಿನಲ್ಲಿ ರಾಷ್ಟ್ರೀಯ ಮತದಾರರ ದಿನದ ಪ್ರತಿಜ್ಞಾ ವಿಧಿ ಸ್ವೀಕಾರ




ಕಾರ್ಕಳದ ಕ್ರಿಯೇಟಿವ್ ಪ.ಪೂ ಕಾಲೇಜಿನಲ್ಲಿ ಭಾರತದ ಚುನಾವಣಾ ಆಯೋಗದ ಆದೇಶದಂತೆ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು.

## ಕೃಷಿ ವಿಜ್ಞಾನ ವೃತ್ತಿ ಮಾರ್ಗದರ್ಶನ ಕಾರ್ಯಗಾರ

**ಕಾರ್ಕಳ:** ಸ್ಪರ್ಧಾತ್ಮಕ ಪ್ರಪಂಚದಲ್ಲಿ ಬಹು ಆಯ್ಕೆಯ ಉದ್ಯೋಗಗಳಿವೆ. ವಿದ್ಯಾರ್ಥಿಗಳು ಪಿಯು ಹಂತದಲ್ಲಿಯೇ ಮುಂದಿನ ಭವಿಷ್ಯವನ್ನು ಚಿಂತನೆ ಮಾಡಿ ಸರಿಯಾದ ಕೋರ್ಸ್‌ನ್ನು ಆಯ್ದುಕೊಳ್ಳಬೇಕು ಎಂದು ಡಾ. ಶ್ರೀಕಾಂತ್ ಕರೆ ನೀಡಿದರು. ಅವರು ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ನಡೆದ ವೃತ್ತಿ ಮಾರ್ಗದರ್ಶನ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು. ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ದೊರಕಿಸಿಕೊಳ್ಳುವುದು ಹೇಗೆಂಬುದನ್ನು ಮಾರ್ಗದರ್ಶನ ನೀಡಿದರು.

ಕ್ರಿಸ್ಟಲ್ ಎಜುಕೇಶನ್ ಸರ್ವೀಸಸ್ ನ ಎಂ.ಡಿ. ಶ್ರೀ ಮಹೇಂದರ್ ಕುಮಾರ್ ಮಾತನಾಡಿ ವಿವಿಧ ಕೃಷಿ ಸಂಬಂಧಿತ ಅಧ್ಯಯನದ ಬಳಿಕ ಇರುವ ವಿಪುಲ ಉದ್ಯೋಗಾವಕಾಶಗಳ ಬಗ್ಗೆ ಸವಿಸ್ತಾರ ಮಾಹಿತಿ ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಸಂದೇಹಗಳಿಗೆ ಪರಿಹಾರ ಸೂಚಿಸಿದರು.

ಈ ಸಂದರ್ಭದಲ್ಲಿ ಕ್ರಿಯೇಟಿವ್ ವಿದ್ಯಾಸಂಸ್ಥೆಯ




ಸಂಸ್ಥಾಪಕರಾದ ಶ್ರೀ ಅಶ್ವತ್ ಎಸ್.ಎಲ್, ಗಣಪತಿ ಭಟ್ ಕೆ.ಎಸ್ ಮತ್ತು ಅಮೃತ್ ರೈ, ಸಾರ್ವಜನಿಕ ಸಂಪರ್ಕಾಧಿಕಾರಿ ಲಿಶನ್ ಗೌಡ, ಜಯಪ್ರಕಾಶ್ ಶೆಟ್ಟಿ ಉಪಸ್ಥಿತರಿದ್ದರು. ಜೀವಶಾಸ್ತ್ರ ಉಪನ್ಯಾಸಕ ಡಾ. ಆದಮ್ ಶೇಖ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಸಂವಿಧಾನ ಶಿಲ್ಪಿ ಡಾ। ಬಿ ಆರ್ ಅಂಬೇಡ್ಕರ್ ಜಯಂತಿ




**ಕಾರ್ಕಳ:** ಸಂವಿಧಾನ ಶಿಲ್ಪಿ ಡಾ। ಬಿ ಆರ್ ಅಂಬೇಡ್ಕರ್ ರವರ 132 ನೇ ಜಯಂತಿಯನ್ನು ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ಆಚರಿಸಲಾಯಿತು.

## "ಪ್ರತಿಭೆ, ಸಮಯ, ಸ್ಫೂರ್ತಿ ಇದ್ದರೆ ಸಾಹಿತ್ಯದ ಬೆಳವಣಿಗೆ"

### – ಶ್ರೀ ನೀಲಾವರ ಸುರೇಂದ್ರ ಅಡಿಗ

**ಉಡುಪಿ:** ಕ್ರಿಯೇಟಿವ್ ಪ.ಪೂ ಕಾಲೇಜ್ ಉಡುಪಿಯಲ್ಲಿ ಸಾಹಿತ್ಯ ಸಾಂಗತ್ಯ–6 ಕಾರ್ಯಕ್ರಮದಡಿ ಹಮ್ಮಿಕೊಂಡಿರುವ ಸಾಹಿತ್ಯದೆಡೆಗೆ ಯುವಜನತೆ ಎಂಬ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳನ್ನು ಕುರಿತು ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ನೀಲಾವರ ಸುರೇಂದ್ರ ಅಡಿಗರವರು ಮಾತುಗಳನ್ನಾಡಿದರು.



ಪ್ರತಿಭೆ, ಸಮಯ, ಸ್ಫೂರ್ತಿ ಇದ್ದರೆ ಸಾಹಿತ್ಯ ಬೆಳವಣಿಗೆಯಾಗುತ್ತದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸಾಹಿತ್ಯವನ್ನು ಮೈಗೂಡಿಸಿಕೊಳ್ಳುವುದರಿಂದ ಅವರ ಸಂಪೂರ್ಣ ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ.ಮತ್ತು ಧನಾತ್ಮಕವಾಗಿ ಚಿಂತಿಸುವುದರಿಂದ ವ್ಯಕ್ತಿ ಯಶಸ್ಸನ್ನು ಗಳಿಸಲು ಸಾಧ್ಯವಾಗುತ್ತದೆ ಎಂದು ತಮ್ಮಮನದಾಳದ ಮಾತುಗಳನ್ನು ಹಂಚಿಕೊಂಡರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಸಂಸ್ಥೆಯ ಸಂಸ್ಥಾಪಕರಲ್ಲಿ ಓರ್ವರಾದ ಅಶ್ವತ್ ಎಸ್. ಎಲ್. ರವರು, "ಸಾಹಿತ್ಯವನ್ನು ಓದುವುದರಿಂದ ಪ್ರತಿಸ್ಪರ್ಧಿಯನ್ನು ಎದುರಿಸುವಲ್ಲಿ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಸಾಹಿತ್ಯ ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಬೇಕು" ಎಂದು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೋ ರವರು "ಸಾಹಿತ್ಯ ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ಯುವಜನತೆ ಅದನ್ನು ಮೈಗೂಡಿಸಿಕೊಂಡು ಕಾರ್ಯ ಪ್ರವೃತ್ತರಾಗಬೇಕು" ಎಂದು ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಸ್ಥಾಪಕರಲ್ಲಿ ಓರ್ವರಾದ ಆದರ್ಶ ಎಂ.ಕೆ. ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕರಾದ ಶ್ರೀ ಸಂತೋಷ್ ರವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ವೃತ್ತಿ ಶಿಕ್ಷಣ ಕಾರ್ಯಗಾರ




**ಹಾಸನ:** ಹೆಚ್. ಕೆ. ಎಸ್ ಪಿ ಯು ಕಾಲೇಜು ಹಾಸನದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಕಾರ್ಯಗಾರ ನಡೆಯಿತು.

**ಹಾಸನ :** ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳದ ಶೈಕ್ಷಣಿಕ ಸಹಭಾಗಿತ್ವದ ಹೆಚ್. ಕೆ. ಎಸ್ ಪಿ ಯು ಕಾಲೇಜು ಹಾಸನದಲ್ಲಿ ದಿನಾಂಕ 22–09–2021ನೇ ಬುಧವಾರದಂದು **'ಕಾಮರ್ಸ್ ಫೆಸ್ಟ್'** ಜರಗಿತು. ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಕ್ರಿಯಾತ್ಮಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಲ್ಲಿ ಸಂಪನ್ಮೂಲತೆಯನ್ನು ಸೃಜಿಸಿ ಸ್ಪರ್ಧಾತ್ಮಕ ಯುಗದಲ್ಲಿ ಅಗತ್ಯವಾಗಿರುವ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಈ ಕಾರ್ಯಕ್ರಮವು ಬಹಳ ಮಹತ್ವದ್ದಾಗಿದೆ. ಈ ಸಂಧರ್ಭದಲ್ಲಿ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳದ ಸಂಸ್ಥಾಪಕ ಸದಸ್ಯರುಗಳಾದ ಅಶ್ವತ್ ಎಸ್. ಎಲ್, ಡಾ.ಗಣನಾಥ್ ಶೆಟ್ಟಿ, ಪ್ರಾಂಶುಪಾಲರಾದ ವಿಮಲ್ ರಾಜ್. ಜಿ ಯವರು ಉಪಸ್ಥಿತರಿದ್ದರು.




ಕಾವ್ಯೋಕ್ತಿ | ಕ್ರೌರ್ಯಗಳ ಆಚೆಗೂ ಉಂಟಲ್ಲ, ಸ್ವರ್ಗಕ್ಕೆ ಕರೆದೊಯ್ಯಬಲ್ಲದು ಕ್ಷಮೆಯ ಏಣಿ – ಸು.ರಂ.ಎಕ್ಕುಂಡಿ



# ಸ್ವಾಗತಂ

## ಸಹಸ್ರ-ಸಾವಿತ್ರಿಯರ ಸಂಭ್ರಮ-ಸಾಹಸ

ಸಪ್ತ ಸಾಗರಗಳ ಸೀಮೆಯಾಚೆ, ಸ್ವಚ್ಚವಾದ-ಸಂತಸ ಭರಪೂರವಾದ ಸಜ್ಜನರ ಸಮಾಗಮದಲ್ಲಿ "ಸಹಸ್ರಾಕ್ಷನೆಂಬ" ಸಂಪ್ರದಾಯಸ್ಥ ಸಜ್ಜನ, ಸಹನಶೀಲ, ಸದೃಢ, ಸುಶೀಲ, "ಸತ್ಯದ ಸಂತ"ನೆಂದು ಸೀಮೆ-ಸೀಮೆಯಲ್ಲೂ ಸಾರಿತ್ತಿವನ ಸೋಜಿಗ.

ಸುಖದ ಸುಪ್ಪತ್ತಿನಲ್ಲಿ ಸಂಕಷ್ಟಕ್ಕೆ ಸಿಲುಕಿದ ಸಂದರ್ಭ, ಸಂಪಿಗೆ, ಸುರಗಿ, ಸುರಹೊನ್ನೆಗಳನ್ನು ಸೇರಿಸಿ ಸಂತೆಯೆಡೆಗೆ ಸಾಗುವ ಸಂಯೋಜನೆ. ಸೂರ್ಯದೇವ "ಸಾವಮ್ರಾಟ"ನಂತೆ ಸುಡುತ್ತಿದ್ದಾಗ, ಸಾಗಲು ಸಾರಿಗೆಯಿಲ್ಲದೆ ಸುಸ್ತುಗೊಂಡು ಸುಧಾರಿಸಿಕೊಂಡು ಸಂತೆಯನ್ನು ಸೇರಿದನು "ಸಂಯಮ"ವಂತೆ ಸೂರ್ಯನಿಗೇ ಸವಾಲೆಸಗಿ. ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಿದ್ದರು, ಸಹಸ್ರಾಕ್ಷನಂತಹ ಸಹೃದಯಿಗಳು. ಸ್ವಾದಿಷ್ಟ ಸೇವನೆಗಳು, ಸವಿಗಾನದ ಸಿರಿ ಸುದಿನ ಸೀತಾರಾಮರ ಸ್ವಯಂವರ ಸೆಳೆಯುತ್ತಿದೆ ಸೇರಿದವರ ಸಮೀಪದಲ್ಲೇ ಸಾಲಾಗಿರಿಸಿದನು "ಸೂರ್ಯ ಸ್ನೇಹಿ"ಗಳನ್ನು. "ಸಾಕಮ್ಮ, ಸೀರೆಗೆ ಸರಿಹೊಂದುವ ಸ್ಯಾವಂತಿಗೆ ಸಿಗದಿಡೀ ಸಂತೆಯಲ್ಲಿ. ಸವಿತಮ್ಮನ ಸಿರಿಮುಡಿಗೆ ಸೌಂದರ್ಯ ಸೇರಿಸುವುದು ಸಂಪಿಗೆ". ಸುಡುಬಿಸಿಲಿನೊಂದಿಗೆ ಸೆಣಸಾಡುತ್ತಿದ್ದ ಸಹಸ್ರಾಕ್ಷನ ಸುದಿನದಂದು ಸತಿ, ಸುಕೋಮಲೆ, ಸುಂದರಿ "ಸಾವಿತ್ರಿ" ಸನ್ನದ್ಧಳಿದ್ದಳು. ಸತ್ವಪರೀಕ್ಷೆಯ ಸಮಯ.

"ಸಿಪಾಯಿಗಳ ಸರದಾರ", "ಸಾಹಸವೀರ" ಸೈನ್ಯಾಧ್ಯಕ್ಷನಾದ ಸೇನಾಧಿಪತಿಯು ಸುಪುತ್ರಿಯೊಡನೆ ಸಂತೆಯಲ್ಲಿ ಸೇರಿದವರೊಂದಿಗಿದ್ದನು. ಸಹಸ್ರಾಕ್ಷನ ಸತಿಯು ಸೇನಾಧಿಪತಿಯ ಸುಪುತ್ರಿಗೆ, "ಸೌಂದರ್ಯ ಸಜ್ಜಿತಳೆ, ಸಹಸ್ರನ ಸಂಪಿಗೆ ಸೇರಿಸಿಕೋ ಸಿರಿವಂತಿಕೆಗೆ". ಸಹಸ್ರಾಕ್ಷನು ಸ್ವತಃ ಸಂಪಿಗೆ ಸೇರಿಸಲು ಸಜ್ಜಾದುದ್ದನ್ನು ಸೇನಾಪತಿಯು ಸಹಿಸಲಾರದೆ, "ಸೂರ್ಯವಂಶಕ್ಕೆ ಸಂಬಂಧಿಸಿದವರ ಸ್ಪರ್ಶಿಸಿದ್ದಕ್ಕೆ ಸರಿದಾರಿಗೆ ಸೇರಿಸುವೆ". ಸಾವಿತ್ರಿಯು, "ಸೇನಾಧಿಪತಿಗಳೇ ಸಜ್ಜನನು ಸ್ವೇಚ್ಛೆಯಿಂದ ಸಿಂಗರಿಸಿದರೆ ಸಹಿಸಲೇಕೆ ಅಸಾಧ್ಯ?", ಸಿಂಹಿಣಿಯಂತೆ ಸವಾಲೊಡ್ಡುವಳು. ಸೇನಾಧಿಪತಿ, "ಸ್ವರಾಜ್ಯದಲ್ಲಿ ಸುಖಜೀವನಕ್ಕೆ, ಸಂಬಂಧಗಳಿಗೆ, ಸತ್ಯಪಾಲನೆಗೆ ಸೂರ್ಯವಂಶದವರು ಸಾಕ್ಷಿ, ಶಿಕ್ಷೆಗೆ ಸಹಸ್ರನೊಂದಿಗೆ ಸರದಿಯಲ್ಲಿ ಸೇರು." ಸವಾಲಿಗೆ ಸಿಡಿಲಂತೆ, "ಸೂರ್ಯವಂಶದ ಸರದಾರನನ್ನೇ ಸ್ಮರಿಸಿದರು, ಸಹಸ್ರನರಸಿ, ಸರದಿಯಲ್ಲಿ ಸಂಬಂಧಿತಳಾಗುವುದಿಲ್ಲ".

"ಸ್ವರಾಜ್ಯದಲ್ಲಿ ಸುತ್ತಿ ಸಜ್ಜನರನ್ನು, ಸಾಹಸಿಗರ ಸದೃಢತೆಯನ್ನು ಸರದಾರನಿಗೆ ಸೌಖ್ಯವೆಲ್ಲಾ ಸ್ವಾಮಿಯೆನ್ನುವೆನು. ಸಾವಿತ್ರಿ-ಸಹಸ್ರರಿಗೆ ಸೀರೆಯನ್ನು ಸೇರಿಸುವೆನು". ಸುತ್ತ ಸೇರಿದವರೆಲ್ಲಾ ಸಂತಸಗೊಂಡರು. ಸಹಸ್ರಾಕ್ಷನು ಸ್ವಾಮಿಯಲ್ಲಿ. "ಸತ್ವಪರೀಕ್ಷೆಗಳನ್ನು ಸೇರಿಸು, ಸಹಸ್ರನಾರಸಿ ಸವಾಲೊಡ್ಡಿ ಸಾಧಿಸುವಳೆಂದು ಸೌಖ್ಯದಿಂದಿರುವೆನು".

ಸುಖಾಂತ್ಯಂ



ದೇವಲ್ ಸುಬ್ರಹ್ಮಣ್ಯ
ದ್ವಿತೀಯ ಪಿಯುಸಿ ಪಿಸಿಎಂಸಿ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ


# ಚಿತ್ರ ಗ್ಯಾಲರಿ





ಸನ್ಮತಿ ಜೆ. ಜೋಟೂರ್
ದ್ವಿತೀಯ ಪಿಯುಸಿ, ಪಿಸಿಎಂಸಿ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ

# ಅಮ್ಮ



ಅಮ್ಮ ಎಂಬ ಎರಡಕ್ಷರದ ಪದ
ಆ ಪದಕಿರುವ ಶಕ್ತಿ ಬೇರಾವುದಕ್ಕೂ ಇಲ್ಲ
ಆ ಪದದಲೇ ಅಡಗಿದೆ ಧೈರ್ಯ, ಸುಖವೆಲ್ಲ
ಆ ಅಮ್ಮ ಎಂಬ ಕೂಗಿಗೆ ಕೊನೆಯಿಲ್ಲ

ತನ್ನ ಕರುಳಬಳ್ಳಿಯನು ಕತ್ತರಿಸಿ, ರಕ್ತವನು ಹೊರಚೆಲ್ಲಿ
ತನ್ನ ಉಸಿರ ನೀಡಿ, ಬದುಕು ಕೊಟ್ಟು ಸಾಕಿರುವ
ಅಮ್ಮನ ಮಡಿಲಿಗಿಂತ ಮಿಗಿಲಾದ ಸ್ವರ್ಗ ಬೇರಾವುದು ಇಲ್ಲ
ಅಮ್ಮನ ವಾತ್ಸಲ್ಯಕೆ ಎಂದೂ ಕೊರತೆ ಇಲ್ಲ

ತನ್ನ ಕಷ್ಟವನ್ನು ಹೊಟ್ಟೆಯಲಿ ಬಚ್ಚಿಟ್ಟು
ತನ್ನ ಮಗುವಿನ ಹೊಟ್ಟೆ ತುಂಬಿಸಿ
ಆ ಮಗುವಿನ ನಗುವ ಕಂಡು ತಾನು ನಗುವ
ಆ ತಾಯಿಯ ಹೃದಯ ಬೇರೆ ಯಾರಲೂ ಇಲ್ಲ
ಅಮ್ಮನ ಪ್ರೀತಿಗೆ ಎಂದೂ ಮಿತಿಯಿಲ್ಲ



ಮನವಿ ರವೀಂದ್ರ ಶೆಟ್ಟಿ
ದ್ವಿತೀಯ ಪಿಯುಸಿ ಪಿಸಿಎಂಸಿ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ

# ಸ್ಟೂಡೆಂಟ್ಸ್ ಕಾರ್ನರ್

## ಆದರ್ಶ ಕ್ರಾಂತಿಕಾರಿ ಆಜಾದ್

ಚಂದ್ರಶೇಖರ ಆಜಾದ್ ಒಬ್ಬ ಧೀರ ಹೋರಾಟಗಾರ. ಅವರು ಕೂಡ ಪೃಥ್ವಿರಾಜ ರಾಣಾ ಪ್ರತಾಪ ಸಿಂಹ, ಶಿವಾಜಿ, ಗುರು ಗೋವಿಂದ ಸಿಂಹ ಇವರ ಹಾಗೆ ಹುಟ್ಟು ಸೈನಿಕ. ಇವರು 1906 ಜುಲೈ 23 ರಂದು ಒಂದು ಬಡ ಕುಟುಂಬದಲ್ಲಿ ಜನಿಸಿದರು. ಇವರ ತಂದೆಯ ಹೆಸರು ಸೀತಾರಾಮ ತಿವಾರಿ ಮತ್ತು ತಾಯಿಯ ಹೆಸರು ಜಗರಾಣಿದೇವಿ.



ಚಂದ್ರಶೇಖರ್ ಮನೆಗೆ ಸಹಾಯ ಮಾಡಬೇಕೆಂದು ಓದು ನಿಲ್ಲಿಸಿ ಕೆಲಸಕ್ಕೆ ಸೇರಿದರು. ಇನ್ನು ಹೆಚ್ಚು ಸಂಪಾದಿಸಬೇಕೆಂದು ಅವರು ಮುಂಬಯಿಗೆ ಹೋದರು. ಅಲ್ಲಿ ಹಡಗಿನ ಬಂದರುಗಳಲ್ಲಿ ಮೂಟೆ ಹೊರುವ ಕೆಲಸವನ್ನು ಮಾಡು ತ್ತಿದ್ದರು. ಕೂಲಿಗಳ ಜೊತೆಯಲ್ಲಿ ವಾಸ ಮಾಡಿದರು. ಆದರೆ ಅವರಿಗೆ ಸಮಾಧಾನ ಸಿಗಲಿಲ್ಲ. ನಂತರ ತಾನು ಚೆನ್ನಾಗಿ ಓದಿ ದೊಡ್ಡ ಸಂಸ್ಕೃತ ವಿದ್ವಾಂಸನಾಗಬೇಕೆಂದು ಮುಂಬಯಿಯನ್ನು ತೊರೆದು ಕಾಶಿಗೆ ಹೋದರು. ಆ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿತ್ತು. ಮಹಾತ್ಮ ಗಾಂಧೀ, ಮದನಮೋಹನ ಮಾಳವೀಯ, ಲಾಲಾ ಲಜಪತ್‌ರಾಯ್ ಮುಂತಾದ ಹಿರಿಯರು ನಮ್ಮ ಹೋರಾಟದ ನಾಯಕರು. ಆ ಹೋರಾಟದ ಒಂದು ಅಂಗವಾಗಿ "ಅಸಹಕಾರ ಆಂದೋಲನ" ಪ್ರಾರಂಭವಾಯಿತು. ಅಸಹಕಾರ ಆಂದೋಲನ ಎಂದರೆ ಆಂಗ್ಲರಿಗೆ ಸಹಕಾರ ಮಾಡದೆ ಇರುವುದು. ಅವರು ನಡೆಸುತ್ತಿದ್ದ ಕೋರ್ಟು, ಕಚೇರಿ, ಶಾಲೆ, ಕಾಲೇಜುಗಳನ್ನು ಬಹಿಷ್ಕರಿಸುವುದು. ಮೆರವಣಿಗೆ, ಸಭೆ, ಪ್ರದರ್ಶನ ಹರತಾಳ ನಡೆಸಿ ಅವರ ಆಳ್ವಿಕೆಯನ್ನು ಪ್ರತಿಭಟಿಸುವುದು. ಆಂಗ್ಲರು ಭಾರತವನ್ನು ಬಿಟ್ಟು ಹೋಗಬೇಕೆಂದು ಬಲವಾಗಿ ಒತ್ತಾಯಿಸುವುದು. ಇದರ ಬಗ್ಗೆ ಯೋಚಿಸಿದ ಚಂದ್ರಶೇಖರ್ ಭಾರತಮಾತೆಯ ಸೇವೆ ಮಾಡಬೇಕೆಂದು ಆ ಆಂದೋಲನವನ್ನು ಸೇರಿದರು.

ಒಂದು ದಿನ ಕಾಶಿಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆಯ ಮೇಲೆ ಪೋಲಿಸರು ಲಾಠಿಛಾರ್ಜ್ ಮಾಡಿದರು. ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆಯ ಮುಂಭಾಗದಲ್ಲಿದ್ದ ಒಬ್ಬ ಹಿರಿಯವರನ್ನಂತೂ ಒಬ್ಬ ಪೊಲೀಸ್ ಅಧಿಕಾರಿ ಸಿಕ್ಕಾಪಟ್ಟೆ ಹೊಡೆದು ಹಾಕಿದರು. ಇದನ್ನು ದೂರದಿಂದ ವೀಕ್ಷಿಸುತ್ತಿದ್ದ ಚಂದ್ರಶೇಖರ್ ಮೈ ಎಲ್ಲ ಬೆಂಕಿ ಆಯಿತು. ಆ ಪೊಲೀಸ್ ಅಧಿಕಾರಿಗೆ ಗುರಿ ಇಟ್ಟು ಒಂದು ಕಲ್ಲು ಬೀಸಿದರು. ಅದು ಠಪ್ಪಂತ ಪೊಲೀಸ್ ಅಧಿಕಾರಿಯ ಹಣೆಗೆ ಬಡಿಯಿತು. ಪೊಲೀಸರು ಅವರನ್ನು ಅಟ್ಟಿಸಿಕೊಂಡು ಹೋಗಿ ಬಹಳಷ್ಟು ಸಮಯದ ನಂತರ ಹಿಡಿದರು. ಮರುದಿನ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಅಲ್ಲಿನ ನ್ಯಾಯಾಧೀಶ ಬಹಳ ಕೆಟ್ಟವನು. ಭಾರತೀಯರಿಗೆ ಉಗ್ರ ಶಿಕ್ಷೆ ವಿಧಿಸುತ್ತಿದ್ದ. ಅವನು ಚಂದ್ರಶೇಖರರನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಾ ಅಬ್ಬರಿಸಿದ, "ಹೇಳೋ ಏನು ನಿನ್ನ ಹೆಸರು?" ಎಂದು ಹೇಳಿದಾಗ ಚಂದ್ರಶೇಖರರು "ಹೂಂ ನನ್ನ ಹೆಸರು ಆಜಾದ್!"ಎಂದು ಹೇಳಿದರು. ಆಜಾದ್ ಎಂದರೆ ಸ್ವತಂತ್ರ ಎಂದು ಅರ್ಥ. ನಾನು ಯಾರಿಗೂ ಗುಲಾಮನಲ್ಲ ಎಂದು ಅರ್ಥ . ನ್ಯಾಯಾಧೀಶ ಇನ್ನೊಂದು ಪ್ರಶ್ನೆ "ನಿನ್ನಪ್ಪನ ಹೆಸರು?" ಎಂದು ಕೇಳಿದಾಗ "ಸ್ವಾಧೀನತೆ" ಎಂದರು, "ನಿನ್ನ ವಿಳಾಸ?" ಸೆರೆಮನೆ ಎಂದರು. ಒಂದೊಂದು ಉತ್ತರವೂ ಗುಂಡು ಹೊಡೆದಂತೆ ಹೊರಬಂತು. ಆ ದುಷ್ಟ ನ್ಯಾಯಾಧೀಶನಿಗೆ ದಿಟ್ಟ ಉತ್ತರ ಕೊಟ್ಟ ಪುಟ್ಟ ಬಾಲಕನನ್ನು ನೋಡಿ ಅಲ್ಲಿದ್ದವರೆಲ್ಲ ಖುಷಿಪಟ್ಟರು. ಅಬ್ಬ ಎಂಥ ಎದೆಗಾರ ಹುಡುಗ ಎಂದು ಮನಸಾರೆ ಕೊಂಡಾಡಿದರು. ಅವತ್ತಿನಿಂದ ಅವರ ಹೆಸರು 'ಚಂದ್ರಶೇಖರ ಆಜಾದ್' ಆಗಿ ಹೋಯಿತು.

ಇಂಥ ಆಜಾದನಿಗೂ ದ್ರೋಹ ಮಾಡುವ ಗೆಳೆಯರಿದ್ದರು ಎಂದರೆ ಆಶ್ಚರ್ಯ ಆಗುತ್ತೆ ಅಲ್ಲವೇ? ಹೌದು, ನಮ್ಮ ದೇಶದ ಇತಿಹಾಸವೇ ಹಾಗೆ. ದೇಶಭಕ್ತರು ಹುಟ್ಟಿದ ಕಡೆ ಅವರ ಬೆನ್ನಿಗೆ ಚಾಕು ಹಾಕುವ ದೇಶದ್ರೋಹಿಗಳು ಜೊತೆಜೊತೆಯಲ್ಲೇ ಹುಟ್ಟಿಕೊಂಡಿದ್ದರು. ಆಜಾದ್ ಬಹಳ ನಿಷ್ಠೆಯಿಂದ, ಪರಿಶ್ರಮದಿಂದ ಕಟ್ಟಿದ ಸಂಸ್ಥೆಯನ್ನು ಹಾಳು ಮಾಡುತ್ತಿದ್ದರು. ಅದರಲ್ಲಿ ಒಬ್ಬನ ಹೆಸರು ವೀರಭದ್ರ ತಿವಾರಿ ಎಂಬವನಿಗೆ ಪೊಲೀಸರು ಹಣದ ಆಸೆ ತೋರಿಸಿ ಕೊಂಡು ಕೊಂಡುಬಿಟ್ಟರು. ಅವನು ಆಜಾದ್ ಯಾವಾಗ ಏನು ಮಾಡುತ್ತಾನೆ. ಎಲ್ಲಿಗೆ ಹೋಗುತ್ತಾನೆ ಎಂಬುದನ್ನು ಪೊಲೀಸರಿಗೆ ತಿಳಿಸಲಾರಂಭಿಸಿದ. ಒಂದು ದಿನ ಬೆಳಗ್ಗೆ ಆಜಾದ್ ಒಬ್ಬರನ್ನು ಭೇಟಿಮಾಡಲು ಅಲಹಾಬಾದಿನಲ್ಲಿ ಒಂದು ಪಾರ್ಕಿನ ಕಡೆ ಹೆಜ್ಜೆ ಹಾಕಿದ. ಅಲ್ಲಿ ಅವನನ್ನು ಭೇಟಿ ಮಾಡಲು ಬಂದಿದ್ದ ವ್ಯಕ್ತಿಯ ಜೊತೆ ಒಳಗಡೆ ಒಂದು ಮರದ ಕೆಳಗೆ ಕುಳಿತು ಮಾತನಾಡುತ್ತಿದ್ದ. ಇದನ್ನು ಮೊದಲಿನಿಂದಲೇ ಗಮನಿಸಿದ ವೀರಭದ್ರ ತಿವಾರಿ ಪೊಲೀಸರಿಗೆ ಸುದ್ದಿ ತಲುಪಿಸಿದ. ಆಜಾದನನ್ನು ಕೊಂದು ಹಾಕಲು ಅದೇ ಸೂಕ್ತ ಸಮಯವೆಂದು ಪೊಲೀಸರು ನಿರ್ಧರಿಸಿದರು. ನಂತರ ಎಂಬತ್ತು ಮಂದಿ ಬಂದೂಕು ಹಿಡಿದ ಪೊಲೀಸರು ಪಾರ್ಕನ್ನು ಸುತ್ತುವರಿದರು. ಒಂದು ಕಾರಿನಲ್ಲಿ ಬಂದ ಪೊಲೀಸರು ಅಧಿಕಾರಿ ಕಾರಿನಿಂದ ಇಳಿಯುತ್ತಿದ್ದ ಹಾಗೆಯೇ ಆಜಾದ್‌ನ ತೊಡೆಗೆ ಗುರಿಯಿಟ್ಟು ಗುಂಡು ಹಾರಿಸಿದ ಆಗ ಆಜಾದ್ ಪೆಟ್ಟು ತಿಂದ ಸಿಂಹದಂತೆ ಎದ್ದು ನಿಂತುಕೊಂಡು ಕೈಯಲ್ಲಿ ಪಿಸ್ತೂಲು ಹಿಡಿದು ಒಂದೇ ಸಮನೆ ಗುಂಡು ಹಾರಿಸಲಾರಂಭಿಸಿದ. ಅಂದು ಮಹಾಭಾರತದಲ್ಲಿ ಚಕ್ರವ್ಯೂಹದಲ್ಲಿ ಸಿಕ್ಕಿಕೊಂಡ ಅಭಿಮನ್ಯುವೂ ಕೂಡ ಹೀಗೆ ಹೋರಾಡಿರಬೇಕು. ನಂತರ ಅವರ ಬಳಿ ಕೊನೆಯಲ್ಲಿ ಒಂದೇ ಒಂದು ಗುಂಡು ಉಳಿದಿತ್ತು. ಆಗ ಅವನಿಗೆ ಬಾಲ್ಯದ ಪ್ರತಿಜ್ಞೆ ಜ್ಞಾಪಕಕ್ಕೆ ಬಂತು "ಜೀವಂತವಾಗಿ ನಾನು ಎಂದೂ ಪೊಲೀಸರಿಗೆ ಸಿಕ್ಕಿ ಬೀಳುವುದಿಲ್ಲ" ಎಂಬ ನೆನಪು ಬಂದ ಕೂಡಲೇ ಆ ವೀರ ತನ್ನ ತಲೆಗೆ ಗುಂಡು ಹೊಡೆದುಕೊಂಡು ಧರೆಯನ್ನಪ್ಪಿದರು. ಅಜೇಯ ಸೇನಾನಿ ಆಜಾದ್ ಅಕ್ಷರಶ: ಭಾರತಮಾತೆಗೆ ತನ್ನ ರಕ್ತದಿಂದಲೇ ಅಭಿಷೇಕ ಮಾಡಿದರು. ಇಂದು ಕೂಡ ಆ ಧೀರ ಮಣ್ಣಿನ ಮಗ ಚಂದ್ರಶೇಖರ ಆಜಾದನನ್ನು ನಾವೆಲ್ಲ ನೆನೆಯುತ್ತೇವೆ. ಅವರ ದೇಹದಾರ್ಢ್ಯ, ಸಾಮರ್ಥ್ಯ, ಬುದ್ಧಿವಂತಿಕೆ, ತ್ಯಾಗ ಮನೋಭಾವನೆ, ಮಿತ್ರ ಪ್ರೇಮ, ಸಂಘಟನಾ ಶಕ್ತಿ ರಾಷ್ಟ್ರದ ಎಲ್ಲ ಯುವಕರಲ್ಲೂ ಮೂಡಲಿ ಎಂದು ಬಯಸುತ್ತೇನೆ. ಅವರೇ "ಆದರ್ಶ ಭಾರತೀಯ ಕ್ರಾಂತಿಕಾರಿ" ಎಂದು ಕೊಂಡಾಡುತ್ತೇವೆ.



ಸೃಜನ್ ಇ ಎಂ
ದ್ವಿತೀಯ ಪಿಯುಸಿ, ಪಿಸಿಎಂಸಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

# ಶಬ್ದತೀರ

## ಈ ಹೊತ್ತಿನ ಹೊತ್ತಗೆ

ನಾನು ಓದಿದ ಕಾದಂಬರಿಯ ಹೆಸರು 'ದುರ್ಗಾಸ್ತಮಾನ' ಎಂಬುದಾಗಿದೆ'. ಈ ಕಾದಂಬರಿಯನ್ನು ತ.ರಾ.ಸು ಎಂಬ ಹೆಸರಿನಿಂದ ಪ್ರಖ್ಯಾತರಾದಂತಹ ತ.ರಾ. ಸುಬ್ಬರಾವ್ ಅವರು ರಚಿಸಿದ್ದಾರೆ. ಈ ಕಾದಂಬರಿಯು ತ.ರಾ.ಸು ಅವರ ಖ್ಯಾತ ಕಾದಂಬರಿಗಳಲ್ಲಿ ಒಂದಾಗಿದೆ. ಈ ಕಾದಂಬರಿಯಲ್ಲಿ ಮದಕರಿನಾಯಕನ ಜೀವನದ ಬಗ್ಗೆ ಉಲ್ಲೇಖ ಮಾಡಲಾಗಿದೆ. 'ಚಿತ್ರದುರ್ಗದ ಒಬ್ಬ ರಾಜನ ಮರಣದ ನಂತರ ಆ ರಾಜನ ಪಾಳೆಯಗಾರರಲ್ಲಿ ಒಬ್ಬನಾದಂತಹ ಮದಕರಿಯು ತಂದೆ ಪಟ್ಟಕ್ಕೆ ಬರುತ್ತಾರೆ. ಆಗ ಮದಕರಿ ಹಾಗೂ ಆತನ ತಮ್ಮ ಇನ್ನೂ ಚಿಕ್ಕವರಾಗಿರುತ್ತಾರೆ. ಆಗಿನಿಂದಲೇ ಆ ಇಬ್ಬರು ಅಣ್ಣ ತಮ್ಮಂದಿರಿಗೆ ಚಿತ್ರದುರ್ಗದ ರಾಣಿ ಒಂದೊಂದು ವಿಭಾಗಕ್ಕೆ ಶಿಕ್ಷಣವನ್ನು ಕೊಡಿಸುತ್ತಾಳೆ. ಮದಕರಿ ನಾಯಕನಿಗೆ ರಾಜನೀತಿಯದ್ದು ಹಾಗು ಆತನ ತಮ್ಮನಿಗೆ ಮಂತ್ರಿಯ ಪದವಿಯ ಶಿಕ್ಷಣವನ್ನು ಕೊಡಿಸಲಾಗುತ್ತದೆ. ಮದಕರಿಯು ಸುಮಾರು ಆತನ ಹದಿನೆಂಟನೇ ವಯಸ್ಸಿನಲ್ಲಿ ಪಟ್ಟಕ್ಕೆ ಬರುತ್ತಾನೆ. ಆಗ ಆತನ ಪಕ್ಕದ ರಾಜ್ಯದ ರಾಜರುಗಳು ಆತನ ಮೇಲೆ ಆಕ್ರಮಣ ಮಾಡುತ್ತಾರೆ. ಆದರೆ ಅವೆಲ್ಲ ಯುದ್ಧದಲ್ಲಿ ಮದಕರಿ ವಿಜಯಿಸುತ್ತಾನೆ. ಆಗ ತಾನೇ ಮತ್ತೊಂದೆಡೆ ಹೈದರಾಲಿ ಹಾಗೂ ಮರಾಠರ ನಡುವೆ ಯುದ್ಧ ನಡೆಯುತ್ತಿದ್ದ ವೇಳೆಯಲ್ಲಿ ಮದಕರಿಯ ಸಹಾಯ ಕೋರಿ ಇಬ್ಬರೂ ಬರುತ್ತಾರೆ. ಮೊದಲು ಮದಕರಿ ಮರಾಠರಿಗೆ ಸಹಕರಿಸುತ್ತಾನೆ. ದ್ವಿತೀಯ ಯುದ್ಧದಲ್ಲಿ ಆತನ ಮಂತ್ರಿಯ ಸಲಹೆಯಂತೆ ಅವನು ಹೈದರಾಲಿಗೆ ಸಹಾಯ ಮಾಡುತ್ತಾನೆ. ಆದರೆ ಹೈದರಾಲಿ ಮದಕರಿಗೆ ಮೋಸ ಮಾಡುತ್ತಾನೆ ನಂತರ ಇದು ಮದಕರಿ ಹಾಗೂ ಆತನ ಮಂತ್ರಿಗೆ ತಿಳಿಯುತ್ತದೆ. ಇದರಿಂದ ಬೇಸತ್ತ ಆತನ ಮಂತ್ರಿ ತನ್ನ ಸ್ಥಾನವನ್ನು ಮದಕರಿಯ ತಮ್ಮನಿಗೆ ಕೊಟ್ಟು ತಾನು ದೇಶಾಂತರ ಹೊರಡುತ್ತಾನೆ. ಈ ರೀತಿಯಾದ ಹಲವು ಕಥೆಗಳನ್ನು ಒಳಗೊಂಡಂತಹ ಕಾದಂಬರಿ ಇದಾಗಿದೆ. ಆದ್ದರಿಂದ ಈ ಕಾದಂಬರಿಯನ್ನು ಎಲ್ಲರೂ ಒಮ್ಮೆ ಓದಲೇ ಬೇಕು ಹಾಗೂ ಮದಕರಿಯ ಜೀವನದ ಬಗ್ಗೆ ತಿಳಿದುಕೊಳ್ಳಬೇಕು.






ಪ್ರಜ್ವಲ್ ಭಟ್ಟ
ದ್ವಿತೀಯ ಪಿ.ಯು.ಸಿ ವಾಣಿಜ್ಯ ವಿಭಾಗ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ

# ದೇವರ ಸ್ವರೂಪ



ನನ್ನ ಜಗದಲ್ಲಿಲ್ಲ ಬೇರೇನೂ ನಿನ್ನ ಹೊರತು
ನಾನೆಂದಿಗೂ ಇರಲಾರೆ ನಿನ್ನನ್ನು ಮರೆತು
ಮರೆಯಲಾರದಂತಹ ಮಾಣಿಕ್ಯ ನನ್ನ ಪಿತೃ
ಎಲ್ಲಾ ಹೆಣ್ಣುಮಕ್ಕಳಿಗೆ ನೀನೆ ಪ್ರಪಂಚ
ನಮ್ಮ ನಿಶ್ಚಿಂತೆಯಾದ ನಿದ್ದೆಗೆ ನಿನ್ನ ಹೆಗಲೇ ಮಂಚ
ಎಷ್ಟೇ ತಪ್ಪು ಮಾಡಿದರು ಬೆದರಿಸುವುದು ಅಪರೂಪ
ಅಪ್ಪಾ ನೀನೆ ನಮಗೆಲ್ಲ ದೇವರ ಸ್ವರೂಪ



ಸೌಮ್ಯ ಖಿಚಡಿ
ದ್ವಿತೀಯ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ

**ಕಾವ್ಯೋಕ್ತಿ** | ಕಿಸೆಯಲಿ ಹಣವಿದೆ, ತಿರಗಲು ಕಾರಿದೆ, ತಿಂಡಿ ತಿನಿಸುಗಳ ಸಾಲು, ಪೆನ್ನಿದೆ ಗನ್ನಿದೆ ಶಿಸ್ತಿನ ಸ್ಕೂಲಿದೆ, ಎಲ್ಲಿದೆ ಪ್ರೀತಿಯ ನೆರಳು – ಸುಬ್ರಾಯ ಚೊಕ್ಕಾಡಿ

# ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕ್ರಿಯೇಟಿವ್ ವಿದ್ಯಾರ್ಥಿಗಳ ಅದ್ವಿತೀಯ ಸಾಧನೆ

## ಕಾಲೇಜಿನ ಆರಂಭದ ವರ್ಷದಿಂದಲೇ ಎಲ್ಲಾ ವಿಭಾಗಗಳಲ್ಲಿಯೂ ಅತ್ಯುತ್ತಮ ಫಲಿತಾಂಶ

**ವೈದ್ಯರಾಗುವ ಕನಸಿಗೆ ಸಮರ್ಥ ಆಯ್ಕೆ ಕ್ರಿಯೇಟಿವ್ ಕಾಲೇಜು** | **ನೀಟ್ ಫಲಿತಾಂಶದಲ್ಲೂ ಕ್ರಿಯೇಟಿವ್ ವಿದ್ಯಾರ್ಥಿಗಳ ಮೇಲುಗೈ**

## 661 ಅಂಕಗಳೊಂದಿಗೆ ಜಾಗೃತಿ ಕೆ.ಪಿ ಆಲ್ ಇಂಡಿಯಾ ಕೆಟಗರಿಯಲ್ಲಿ 23ನೇ ರ‍್ಯಾಂಕ್

ರಾಷ್ಟ್ರೀಯ ಪರೀಕ್ಷಾ ಮಂಡಳಿ ನಡೆಸಿದ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಂಸ್ಥೆ ಪ್ರಾರಂಭವಾದ ದ್ವಿತೀಯ ವರ್ಷದಲ್ಲೂ ಅತ್ಯುತ್ತಮ ಫಲಿತಾಂಶ ಗಳಿಸಿದ್ದಾರೆ. ಆಲ್ ಇಂಡಿಯಾ ರ‍್ಯಾಂಕಿಂಗ್‌ನಲ್ಲಿ ಕುಮಾರಿ ಜಾಗೃತಿ ಕೆ.ಪಿ. 661 ಅಂಕಗಳೊಂದಿಗೆ ಕೆಟೆಗರಿಯಲ್ಲಿ 23 ನೇ ರ‍್ಯಾಂಕ್, ಉದ್ಭವ್ ಎಂ.ಆರ್. 625 ಅಂಕಗಳೊಂದಿಗೆ ಕೆಟೆಗರಿಯಲ್ಲಿ 72 ನೇ ರ‍್ಯಾಂಕ್ ಗಳಿಸಿದ್ದಾರೆ. ಹಾಗೆಯೇ ಸಂಸ್ಥೆಯ ವಿದ್ಯಾರ್ಥಿಗಳಾದ ತನುಶ್ರೀ ಕೆ ಎನ್ 625, ಶ್ರೇಯಸ್ ಎಸ್. ಚಿಕಾಲೇ 612 , ಸಾತ್ವಿಕ್ ಎಸ್. ಶೆಟ್ಟಿ 609 , ಚಂದನ ಹೆಚ್.ಎಂ. 605, ಸಾಕ್ಷಿತ್ ಶೆಟ್ಟಿ 604, ಸ್ವೀಕೃತಿ ಶೆಟ್ಟಿ 596, ಗೌರಿ ಸಿ ಸಂಕೊಲ್ 595, ಮನೋಜ ಪಾಲನ್ಕರ್ 592 , ಪ್ರೀತಮ್ ಎಸ್ ಜಿ 584, ಪ್ರಶಿನ್ ಶೆಟ್ಟಿ 578, ಚಮನ್ ಜಿ 576, ಜ್ಞಾನದೀಪ್ ಕೆ.ಆರ್. 555 , ಸಾನ್ವಿ ಎಂ ಆರ್ 548, ಶ್ರೀಗಂಗಾ 547, ಜೀವನ್ ಎ 545 , ನೇಹಾ ಬಿ.ಜಿ 543, ಮಿಂಚು ಪಿ.ಆರ್. 535, ಅವಿನ್ ಫ್ರಾನ್ಸಿಸ್ ಡಿಸೋಜಾ 531, ಅಭಯ್ ಕೆ ಆರ್ 525, ಶ್ರೇಯಸ್ ಎಸ್ ಶೆಟ್ಟಿ 521, ಸುಹಾಸ್ ಜಿ 520, ಆದಿತ್ಯ ಮಹೇಶ್ ಶೇಟ್ 517, ಭರತ್ ವಿ 516 ಪ್ರವೀಣ್ ಆರ್ ಎಮ್ಮಿ 515, ಅಭಿನವ್ ಹೆಚ್ ಬಿ 505 ಅಂಕಗಳಿಸಿ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮೆಡಿಕಲ್ ಸೀಟ್ ಪಡೆದುಕೊಳ್ಳಲು ಅರ್ಹರಾಗಿದ್ದಾರೆ.

ಸುಮಾರು 27 ವಿದ್ಯಾರ್ಥಿಗಳು 500 ಕ್ಕಿಂತ ಅಧಿಕ ಅಂಕ, 70 ವಿದ್ಯಾರ್ಥಿಗಳು 400 ಕ್ಕಿಂತ ಅಧಿಕ ಅಂಕ, 110 ವಿದ್ಯಾರ್ಥಿಗಳು 300 ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಪರೀಕ್ಷೆಗೆ ಕುಳಿತ 209 ವಿದ್ಯಾರ್ಥಿಗಳು ನೀಟ್ ಅರ್ಹತೆ ಪಡೆದುಕೊಂಡಿದ್ದು ಮುಂದಿನ ಕೌನ್ಸೆಲಿಂಗ್ ಹಂತದಲ್ಲಿ ಮೆಡಿಕಲ್ ಕಾಲೇಜು ಆಯ್ಕೆ ಪ್ರಕ್ರಿಯೆ ನಡೆಯಲಿದೆ.




## ಉದ್ಭವ್ ಎಂ.ಆರ್ IISc ಗೆ ಆಯ್ಕೆ

ಕಾರ್ಕಳ ಕ್ರಿಯೇಟಿವ್ ಕಾಲೇಜಿನ ವಿದ್ಯಾರ್ಥಿ ಉದ್ಭವ್ ಎಂ ಆರ್ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc) ಗೆ ಆಯ್ಕೆಯಾಗಿದ್ದಾರೆ. ದೇಶದ ಪ್ರತಿಷ್ಠಿತ ತರಬೇತಿ ಸಂಸ್ಥೆಯಾದ IISc ಗೆ ಪ್ರವೇಶ ದೊರಕಿಸಿಕೊಳ್ಳುವುದು ಅತ್ಯಂತ ಕಠಿಣವಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನಾತ್ಮಕ ಶಿಕ್ಷಣದ ಹಂಬಲವಿರುವ ಅಭ್ಯರ್ಥಿಗಳಿಗೆ ಆಕರ್ಷಕ ವೃತ್ತಿ ಅವಕಾಶಗಳಿಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿರುವ IISc ದೇಶದ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಒಂದಾಗಿದೆ.




ಉದ್ಭವ್ ಎಂ.ಆರ್. JEE ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದು ರಾಷ್ಟ್ರಕ್ಕೆ 152 ನೇ ಸ್ಥಾನವನ್ನು ಗಳಿಸಿದ್ದು, JEE MAINS CHANNEL ಮುಖಾಂತರ 4 ವರ್ಷದ ಬ್ಯಾಚುಲರ್ ಆಫ್ ಸೈನ್ಸ್ (ಸಂಶೋಧನೆ) ಕೋರ್ಸಿಗೆ ಆಯ್ಕೆಯಾಗಿರುತ್ತಾರೆ.

## ಸಿಇಟಿ ಫಲಿತಾಂಶ : ದ್ವಿತೀಯ ವರ್ಷವೂ ಅತ್ಯುತ್ತಮ ಸಾಧನೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೇ 2023 ರಲ್ಲಿ ನಡೆಸಿದ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕಾರ್ಕಳದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಗಳಿಸಿ ರಾಜ್ಯದ ವಿವಿಧ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅರ್ಹರಾಗಿದ್ದಾರೆ. ಜಾಗೃತಿ ಕೆ.ಪಿ. ಕೃಷಿ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 17 ನೇ ರ‍್ಯಾಂಕ್, ಪಶುವೈದ್ಯಕೀಯದಲ್ಲಿ 107ನೇ ರ‍್ಯಾಂಕ್, ಬಿ.ಎನ್.ವೈ.ಎಸ್ ನಲ್ಲಿ 53 ನೇ ರ‍್ಯಾಂಕ್ ಹಾಗೂ ಇಂಜಿನಿಯರಿಂಗ್ ವಿಭಾಗದಲ್ಲಿ 112 ನೇ ರ‍್ಯಾಂಕ್ ಪಡೆದಿದ್ದಾರೆ.




ಇಂಜಿನಿಯರಿಂಗ್ ವಿಭಾಗದಲ್ಲಿ ರಾಜ್ಯಕ್ಕೆ ಅಭಯ್ ಎಸ್.ಎಸ್. 99 ನೇ ರ‍್ಯಾಂಕ್, ಆದಿತ್ಯ ಹೊಳ್ಳ 201 ನೇ ರ‍್ಯಾಂಕ್, ಪ್ರಣವ್ ಪಿ. ಸಂಜಿ 294 ನೇ ರ‍್ಯಾಂಕ್, ಕಾರ್ತಿಕ್ ಕೃಷ್ಣಮೂರ್ತಿ ಹೆಗಡೆ 492 ನೇ ರ‍್ಯಾಂಕ್, ಉದ್ಭವ್ ಎಂ.ಆರ್. 843 ನೇ ರ‍್ಯಾಂಕ್, ಸಾತ್ವಿಕ್ .ಎಸ್. ಶೆಟ್ಟಿ 920 ನೇ ರ‍್ಯಾಂಕ್ ಗಳಿಸಿದ್ದಾರೆ.

ಬಿ.ಎಸ್ಸಿ ಅಗ್ರಿಕಲ್ಚರ್ ವಿಭಾಗದಲ್ಲಿ ಸಾತ್ವಿಕ್ ಎಸ್. ಶೆಟ್ಟಿ 237, ಉದ್ಭವ್ ಎಂ.ಆರ್. 242, ಶ್ರೇಯಸ್ ಎಸ್ ಚಿಕಾಲೆ 333, ಸಾಕ್ಷಿತ್ ಶೆಟ್ಟಿ 457 ನೇ ರ‍್ಯಾಂಕ್ ಪಡೆದಿದ್ದಾರೆ.

ಪಶುವೈದ್ಯಕೀಯ ವಿಭಾಗದಲ್ಲಿ ಉದ್ಭವ್ ಎಂ ಆರ್ 298 ನೇ ರ‍್ಯಾಂಕ್ ಹಾಗೂ ಬಿ. ಎನ್ ವೈ ಎಸ್ ನಲ್ಲಿ 243 ನೇ ರ‍್ಯಾಂಕ್, ಪಶುವೈದ್ಯಕೀಯ ವಿಭಾಗದಲ್ಲಿ ಸಾತ್ವಿಕ್ ಎಸ್.ಶೆಟ್ಟಿ 407 ನೇ ರ‍್ಯಾಂಕ್ ಮತ್ತು ಬಿ.ಎನ್.ವೈ.ಎಸ್. ನಲ್ಲಿ 531 ನೇ ರ‍್ಯಾಂಕ್ ಗಳಿಸಿದ್ದಾರೆ.

ಎಲ್ಲಾ ವಿಭಾಗಗಳನ್ನು ಸೇರಿ 1000ದ ಒಳಗೆ 54 ವಿದ್ಯಾರ್ಥಿಗಳು, 2000 ದ ಒಳಗೆ 112 ವಿದ್ಯಾರ್ಥಿಗಳು, 5000ದ ಒಳಗೆ 203 ವಿದ್ಯಾರ್ಥಿಗಳು ರ‍್ಯಾಂಕ್‌ಗಳನ್ನು ಗಳಿಸುವುದರ ಮೂಲಕ ಅದ್ಭುತ ಸಾಧನೆ ಮಾಡಿದ್ದಾರೆ.


CREATIVE THE LEADER TO GET SUCCESS IN ALL COMPETITIVE EXAMS...

NEET | JEE MAIN | JEE ADVANCED | NDA | NATA | UCEED | AME CET | KCET | IAT | IMU CET | AILET | NIFT | NID | AFSET | CA-FOUNDATION | CSEET | ACCA | CMA

ಕ್ರಿಯೇಟಿವ್ **ನಿನಾದ**

ಕ್ರಿಯಾಶೀಲ ಮನಸ್ಸುಗಳಿಗಾಗಿ...

**ಫಲಿತಾಂಶ ವಿಶೇಷ ಪುರವಣಿ**

# ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕ್ರಿಯೇಟಿವ್ ವಿದ್ಯಾರ್ಥಿಗಳ ಅದ್ವಿತೀಯ ಸಾಧನೆ

## ಕಾಲೇಜಿನ ಆರಂಭದ ವರ್ಷದಿಂದಲೇ ಎಲ್ಲಾ ವಿಭಾಗಗಳಲ್ಲಿಯೂ ಅತ್ಯುತ್ತಮ ಫಲಿತಾಂಶ

**ದ್ವಿತೀಯ ಪಿಯುಸಿಯಲ್ಲಿ ನಿರಂತರ ಶೇ. 100 ಫಲಿತಾಂಶ**

### ರಾಜ್ಯದ ಮೊದಲ 10 ರ್‍ಯಾಂಕ್‌ನ ಒಳಗಡೆ 8 ರ್‍ಯಾಂಕ್ ಪಡೆದ ಕ್ರಿಯೇಟಿವ್ ವಿದ್ಯಾರ್ಥಿಗಳು

| Stream | State Rank | Marks | Name |
|---|---|---|---|
| COMMERCE | 3rd | 595 | ANAGHA |
| SCIENCE | 5th | 592 | PRASTUTH PATEL Y M |
| SCIENCE | 6th | 591 | SUMANTH S SHETTY |
| COMMERCE | 8th | 590 | DIVITH P GOWDA |
| SCIENCE | 9th | 588 | ADITHYA HOLLA |
| SCIENCE | 9th | 588 | ABHAY S S |
| SCIENCE | 10th | 587 | JAAGRUTHI K P |
| COMMERCE | 10th | 588 | AKSHATA RAGHURAY PAI |

**Board Result 2023** — Total Appeared 380 | Distinctions 298 | First Class 82 | 100 out of 100 150 — Achieved 100% Result

Achieved 8 State Ranks Among top 10

### ಸಿ.ಎ. ಅರ್ಹತಾ ಪರೀಕ್ಷೆ

**CA - Foundation 2023**

DEEKSHA, SHRAVYA C S

**CA - Foundation 2022**

AMAR A M, ABHISHEK L NAIK, ASHWITHA, SANMARG, SRUJAN SS

### The Institute of Company Secretary Of India

CSEET ಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು

| Name | Score |
|---|---|
| AARYA ASHOK | 161 |
| ANAGHA | 149 |
| HEGDE ANIRUDHA R | 145 |
| DHRUVA K G | 134 |
| KANANGI SAMEEKSHA | 129 |
| VISMAYA H S | 108 |
| OMKAR P HEGADYAL | 103 |
| DHRUTHI R M | 101 |
| DRITHI D SHETTY | 100 |
| PATIL SHRAVANI ARVIND | 100 |
| AVANEESH DEVADIGA | 100 |

- ಕೇಂದ್ರ ಲೋಕಸೇವಾ ಆಯೋಗ (UPSC) ಎಪ್ರಿಲ್ 16, 2023 ರಲ್ಲಿ ನಡೆಸಿದ ಅತ್ಯಂತ ಕಠಿಣಕರವಾದ ರಾಷ್ಟ್ರಮಟ್ಟದ ಎನ್.ಡಿ.ಎ/ಎನ್.ಎ ಅರ್ಹತಾ ಪರೀಕ್ಷೆ.
- ದೇಶದಾದ್ಯಂತ ಸುಮಾರು 2.24 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದು, ಅದರಲ್ಲಿ 7,964 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.
- ಕಾರ್ಕಳದ ಕ್ರಿಯೇಟಿವ್ ಪ.ಪೂ ಕಾಲೇಜಿನ 03 ವಿದ್ಯಾರ್ಥಿಗಳು ಆಯ್ಕೆ.
- ಪುಣೆಯ ಖಡಕ್‌ವಾಸ್ಲದಲ್ಲಿರುವ NDA ತರಬೇತಿ ಸಂಸ್ಥೆಯಲ್ಲಿ ಬಿ.ಟೆಕ್ ಅಥವಾ ಬಿ.ಎಸ್.ಸಿ ಪದವಿಗೆ ಪ್ರವೇಶ ಪರೀಕ್ಷೆ.

**NDA** [ NATIONAL DEFENCE ACADEMY ]

PRANAV P SANJEE, JAAGRUTHI K P, RAMKUMAR BABU BARAGI

### Our Proud Alumni

- **NEET** — RAGHAVENDRA TALIKOTI — 646 — Pursuing MBBS in Govt. - MMC, Mysuru
- **JEE ADVANCED** — ANVIN B P — Pursuing B.Tech in IIT, Bombay
- **RIE** — SUJNAN M R — State Rank 5th — Pursuing Integrated B.Sc. in RIE, Mysore

**Board Result 2022** — Total Appeared 173 | Distinctions 112 | First Class 61 | 100 out of 100 111 — Achieved 100% Result

Achieved 9 State Ranks Among top 10

## ಒಂದೇ ಸೂರು ಯಶಸ್ಸಿನ ಆಯ್ಕೆ ನೂರು

### NIFT 2023

NATIONAL INSTITUTE OF FASHION TECHNOLOGY

| Name | All India Rank |
|---|---|
| HEMANTH GOWDA S R | 464 |
| YASHWANTH R GOWDA | 2617 |
| KRUTHIK N S | 2728 |
| HARIPRASAD D M | 2743 |
| DEEKSHA H B | 2765 |

### AIFSET — ALL INDIA FORENSIC SCIENCE ENTRANCE TEST

PRANATHI C S, SINCHANA M S, RACHANA R PAI, ANVITHA K, P SHIVANI, CHAITHRA K, SAHANA H, ANUSHA AINAPUR

### MAHE 2023

MAHE MERIT RANK 21 — Bachelor of Architecture (B.Arch) 2023 — Varun G Nayak

### VIT 2023

JOINED VELLORE INSTITUTE OF TECHNOLOGY — Punya R

### JEE (MAIN) - APRIL 2023

- JAGRUTHI K P — ALL INDIA RANK 158 (CATEGORY RANK)
- UDHBHAV M R — ALL INDIA RANK 152 (CATEGORY RANK)
- KARTHIK K HEGDE — All India Rank 2735 | Percentile 98.40 | PHY - 100 Percentile

- Above 95 Percentile ▸ 18
- Above 90 Percentile ▸ 43
- Above 85 Percentile ▸ 66

### UCEED 2023

Organised by IIT Bombay

ISHAN P SUBBAPURMATH — UCEED SCORE 95.53 — ALL INDIA RANK 1919

### NATA (For Architecture)

VARUN G NAYAK, DEEKSHA PANDU, SAHANA N C, PRANAV P SANJEE, SPARSHA P, ANUSHA AINAPURA, NEHA MAIYA, SWASTHIK BHAT


CREATIVE PU COLLEGE KARKALA | HKS PU COLLEGE HASSAN | CREATIVE PU COLLEGE UDUPI

Sapthagiri Campus, Kanangi Road, Hirgana
Karkala - 576 117 | Email : info@creativeedu.in

90198 44492
www.creativeedu.in

## ಸ್ಟೂಡೆಂಟ್ಸ್ ಕಾರ್ನರ್

## ಅಹಂಕಾರ



ನಾನು ನಾನು ಎಂಬುದು ಬಿಡು ಮೊದಲು
ಅಹಂಕಾರವೇ ಆಗಿದೆ ನಿನ್ನ ಅಲಂಕಾರ
ಕೆಟ್ಟತನ ನಿನ್ನಲಿ ಆವರಿಸಲು
ಅದುವೆ ನಿನಗೆ ಹತಾರ

ನಿನ್ನ ಹಠ ಸಾಧಿಸಲು
ಹಿತಕರರಿಂದ ಆಗದಿರು ದೂರ
ಆ ವಿಶ್ವಾಸ ಮರಳಿ ಗಳಿಸದಿರಲು
ಅಹಂಕಾರವೇ ಆಗಿದೆ ನಿನ್ನ ಅಲಂಕಾರ

ಕೆಟ್ಟ ಜನರ ನಂಬಿ ಕೆಡಲು
ಅನುಭವಿಸುವೆ ಘೋರ
ಬರದೆ ಸುಮ್ಮನಿರದು
ನಿನ್ನ ಕೊನೆಯ ತೀರ....



ಭಾವನ ಗಣಪತಿ
ದ್ವಿತೀಯ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ಸ್ನೇಹ ಒಡನಾಟ

ಸ್ನೇಹವೆನ್ನುವ ಪದಕ್ಕೆ ಹಲವಾರು ಅರ್ಥವಿರುತ್ತದೆ. ಸ್ನೇಹವೆನ್ನುವ ವಿಷಯು ಕೇವಲ ಮನುಷ್ಯನಿಗೆ ಮಾತ್ರ ಸೀಮಿತವಾದದ್ದಲ್ಲ. ಅದು ಮನುಷ್ಯ ಹಾಗೂ ಪ್ರಾಣಿ- ಪಕ್ಷಿಗಳ ನಡುವೆಯೂ ಇರಲು ಸಾಧ್ಯವುಂಟು. ಅನಾದಿ ಕಾಲದಿಂದಲೂ ಋಷಿವರ್ಯರೂ ಕೂಡ ಪ್ರಾಣಿ–ಪಕ್ಷಿಗಳನ್ನು ಸಾಕುತ್ತಿದ್ದರು. ಸ್ನೇಹಕ್ಕೆ ಬಣ್ಣವಿಲ್ಲ, ರೂಪವಿಲ್ಲ. ಅದು ಪರಿಶುದ್ಧವಾದ ತಿಳಿನೀರಿನಂತೆ ಇರುತ್ತದೆ. ಸ್ನೇಹವೆಂದರೆ ಹಾಲು ಮತ್ತು ಜೇನು, "ನೇತ್ರ ಹಾಗೂ ಪುಸ್ತಕ"ದಂತೆ ಇರಬೇಕು. ಹಾಲಿಗೆ ಜೇನನ್ನು ಸೇರಿಸಿದಾಗ ಸವಿಯಲು ಬಹಳ ರುಚಿಕರವಾಗಿರುತ್ತದೋ, ಅಂತೆಯೇ ಕಣ್ಣು ಹಾಗೂ ಪುಸ್ತಕಗಳು ಇರುತ್ತದೆ. ಅದು ಒಂದು ಘಳಿಗೆಯೂ ಒಂದನ್ನೊಂದು ಬಿಟ್ಟಿರಲಾರವು. ಕಣ್ಣನ್ನು ನೋಡದೇ ಪುಸ್ತಕದಿಂದಲೂ, ಪುಸ್ತಕವನ್ನು ನೋಡದೇ ಕಣ್ಣಿನಿಂದಲೂ ಇರಲಾಗುವುದಿಲ್ಲ.

ನಮಗೆಲ್ಲ ತಿಳಿದಿರುವಂತೆ ಶ್ರೀಕೃಷ್ಣ ಪರಮಾತ್ಮ ಹಾಗೂ ಕುಚೇಲರ ನಂಟು. ಶ್ರೀಕೃಷ್ಣನು ಕುಚೇಲನನ್ನು 'ನೀನು, ಬಡವ, ನಿನಗೆ ನನ್ನಲ್ಲಿ ಸ್ನೇಹ ಮಾಡಲು ಯೋಗ್ಯತೆಯಿಲ್ಲ' ಎಂದು ಒಂದು ದಿನವೂ ಕೂಡ ಹೀಯಾಳಿಸಲಿಲ್ಲ. ಹಾಗೆ ಶ್ರೀಕೃಷ್ಣ ಅಂದುಕೊಂಡಿದ್ದರೆ ಇಂದಿಗೆ ನಾವು ಅವರ ಉದಾಹರಣೆ ಕೊಡುತ್ತಿರಲಿಲ್ಲ. ನಮಗೆಲ್ಲರಿಗೂ ತಿಳಿದಿರುವಂತೆ ಬಡ–ಬ್ರಾಹ್ಮಣನಾಗಿದ್ದ ಕುಚೇಲ ಶ್ರೀಕೃಷ್ಣನ ಬಾಲ್ಯಸ್ನೇಹಿತನಾಗಿದ್ದನು. ಒಂದು ದಿನ ಕುಚೇಲನು ಶ್ರೀಕೃಷ್ಣನು ದ್ವಾರಕೆಯಲ್ಲಿ ವಾಸವಾಗುತ್ತಿರುವುದರ ಬಗ್ಗೆ ಕೇಳಿ, ಶ್ರೀಕೃಷ್ಣನ ನೋಡಲು ಹೊರಟನು. ಹೋಗುವಾಗ ದಾರಿ ಮಧ್ಯೆ ತಿನ್ನಲು ತನ್ನ ಮನೆಯಿಂದ ಒಂದು ಹಿಡಿ ಅವಲಕ್ಕಿಯನ್ನು ತನ್ನ ಅಂಗವಸ್ತ್ರದಿಂದ ಒಂದು ಗಂಟು ಕಟ್ಟಿ ಹೆಗಲಿಗೆ ಹಾಕಿಕೊಂಡು ಹೋದನು. ತನ್ನ ಮನೆಯಿಂದ ದ್ವಾರಕೆಗೆ 2–3 ದಿನಗಳವರೆಗಿನ ಪ್ರಯಾಣ. ಕೊನೆಗೆ ಕುಚೇಲನು ನಡೆದು ದ್ವಾರಕೆಗೆ ಬಂದು ಸೇರಿದನು. ದ್ವಾರಪಾಲಕರಿಂದ ಕುಚೇಲನು ಬಂದ ಸುದ್ದಿಯನ್ನು ತನ್ನ ಅಂತಃಪುರದಲ್ಲಿ ಇರುವಾಗ ಶ್ರೀಕೃಷ್ಣನು ಕೇಳಿ, ಅಲ್ಲಿಂದ ಓಡೋಡಿ ಬಂದು ಕುಚೇಲನನ್ನು ಅಪ್ಪಿ ಹಿಡಿದನು. ಅವನ ಕ್ಷೇಮ ಸಮಾಚಾರವನ್ನೆಲ್ಲ ಕೇಳಿ, ಅತಿಥಿ ಸತ್ಕಾರ ಮಾಡಿ ಬೀಳ್ಕೊಡುವ ಸಂದರ್ಭದಲ್ಲಿ ತನಗೇನು ತಿನ್ನಲು ತರಲಿಲ್ಲವೇ ಎಂದು ಕುಚೇಲನನ್ನು ಪ್ರಶ್ನಿಸಿದನು. ಏನೂ ತಂದಿಲ್ಲವೆಂದು ಕುಚೇಲನು ಹಿಂದೆ ಸರಿದನು. ಆಗ ಶ್ರೀಕೃಷ್ಣನು 'ಹಾಗಾದರೆ ನಿನ್ನ ಹೆಗಲಲ್ಲಿರುವ ಗಂಟು ಯಾವುದು?' ಎಂದು ವಿಚಾರಿಸಲಾಗಿ ಅದು ನನಗೆ ದಾರಿ ಮಧ್ಯೆಯಲ್ಲಿ ಹಸಿವಾದಾಗ ತಿನ್ನಲು ಒಂದು ಹಿಡಿ ಅವಲಕ್ಕಿಯನ್ನು ತಂದಿದ್ದೆ ಎಂದು ಹೇಳಿದನು. ಅದನ್ನು ಕೇಳಿದ ಕೃಷ್ಣನು ಅವನಿಂದ ಒತ್ತಾಯಪೂರ್ವಕವಾಗಿ ಗಂಟಿನಿಂದ ಬಿಡಿಸಿ ಅದನ್ನು ತಿಂದನು. ಇದರಿಂದ ನಾವು ತಿಳಿದುಕೊಳ್ಳಬೇಕಾದುದೇನೆಂದರೆ, ಬಡವ–ಬಲ್ಲಿದ, ರೂಪ–ಲಾವಣ್ಯ, ಘನತೆ–ಅಂತಸ್ತು ಇದು ಯಾವುದೂ ಸ್ನೇಹಕ್ಕೆ ಅಥವಾ ಗೆಳೆತನಕ್ಕೆ ಅಡ್ಡಿಯಾಗಲಾರವು. ಆದ್ದರಿಂದ, ಸ್ನೇಹವೆಂದರೆ ಎರಡು ದೇಹ, ಒಂದೇ ಜೀವದಂತೆ ಇರಬೇಕು. ಅದು ಕೇವಲ ಬೂಟಾಟಿಕೆಯಾಗಿರಬಾರದು.



ಶ್ರಾವ್ಯಾ ಭಟ್ ಎಸ್
ದ್ವಿತೀಯ ಪಿ.ಯು.ಸಿ ವಾಣಿಜ್ಯ ವಿಭಾಗ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ನಮ್ಮ ಕಾಫಿನಾಡು

### ವೀಕ್ಷನರಿ

ಮಲೆನಾಡು, ಬಯಲುಸೀಮೆಯನ್ನು ತನ್ನ ಒಡಲಲ್ಲಿಟ್ಟುಕೊಂಡ ಚಿಕ್ಕಮಗಳೂರು ಕರ್ನಾಟಕದ ನಿಸರ್ಗ ರಮಣೀಯ ಪ್ರದೇಶಗಳನ್ನು ಅನಾವರಣಗೊಳಿಸುವ ಜಿಲ್ಲೆಗಳಲ್ಲೊಂದು.

ಸಖರಾಯ ಪಟ್ಟಣದ ದೊರೆ ರುಕ್ಮಂದ ತನ್ನ ಕಿರಿಯ ಪುತ್ರಿಗೆ ಬಳುವಳಿಯಾಗಿ ನೀಡಿದ ಊರೇ ಚಿಕ್ಕಮಗಳ ಊರು ಈಗ 'ಚಿಕ್ಕಮಗಳೂರು' ಎಂದು ಕರೆಯಲ್ಪಡುತ್ತಿದೆ ಎಂಬ ಐಹಿತ್ಯವಿದೆ. ಈ ಜಿಲ್ಲೆಯ ಒಂದು ಭಾಗವನ್ನು ಕದಂಬರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿಯ ನಾಯಕರು, ತರೀಕೆರೆ ಪಾಳೆಯಗಾರರು ಆಳಿರುವುದಕ್ಕೆ ಅನೇಕ ಪುರಾವೆಗಳಿವೆ. ಶಿರಾ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶಗಳು ಮೈಸೂರು ಆಡಳಿತದ ತೆಕ್ಕೆಗೆ ಬಂದವು. ಮೈಸೂರು ಅರಸರ ಆಡಳಿತದ ಅವಧಿಯಲ್ಲಿ ಚಿಕ್ಕಮಗಳೂರು ಪ್ರದೇಶಗಳಿಗೆ ಕಡೂರು ಜಿಲ್ಲೆ ಎಂದು ವಿಭಾಗಿಸಲಾಯಿತು. ನಂತರ ಜಿಲ್ಲಾ ಕೇಂದ್ರವನ್ನು 1865ರಲ್ಲಿ ಚಿಕ್ಕಮಗಳೂರಿಗೆ ವರ್ಗಾಯಿಸಿ ಈ ಜಿಲ್ಲೆಯನ್ನು ಚಿಕ್ಕಮಗಳೂರು ಎಂದು ಕರೆಯಲಾಯಿತು.

ಕರ್ನಾಟಕದಲ್ಲಿ ಸ್ಥಾಪನೆಯ ಶತಮಾನೋತ್ಸವವನ್ನು ಆಚರಿಸಿದ ಜಿಲ್ಲೆಗಳಲ್ಲಿ ಒಂದಾದ ಚಿಕ್ಕಮಗಳೂರು ಹತ್ತಾರು ನದಿಗಳ ತವರು. ತುಂಗಾ, ಭದ್ರಾ, ವೇದಾವತಿ, ಹೇಮಾವತಿ, ಯಗಚಿ ನದಿಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಉಗಮಿಸುತ್ತವೆ. ನದಿಗಳ ಜೊತೆಗೆ ದೊಡ್ಡ ಕೆರೆಗಳೂ ಈ ಜಿಲ್ಲೆಗೆ ಇನ್ನೊಂದು ಭೂಷಣ. ಉದಾ: ಮದಗದ ಕೆರೆ, ಅಯ್ಯನ ಕೆರೆಗಳು. ಇದು ಗಿರಿಕಂದರಗಳ ನಾಡು, ಹಲವಾರು ಜಲಪಾತಗಳ ಬೀಡು. ಪಶ್ಚಿಮ ಘಟ್ಟಗಳ ಸಾಲು ಹಬ್ಬಿರುವ ಈ ಜಿಲ್ಲೆಯಲ್ಲಿ ಕಲ್ಲತ್ತಿಗಿರಿ, ಅಬ್ಬೆ, ಹೊನ್ನಮ್ಮನ ಹೊಳೆ ಮೊದಲಾದ ಜಲಪಾತಗಳು, ಝರಿಗಳು ಇವೆ. ಇದು ನಿತ್ಯ ಹರಿದ್ವರ್ಣದ ಕಾಡು, ಅಪೂರ್ವ ಸಸ್ಯದ ಗಣಿ.



ಸದಾ ಹಸಿರು ತುಂಬಿಕೊಂಡಿರುವ ಚಿಕ್ಕಮಗಳೂರು ಜಿಲ್ಲೆಯ ಬಹುಭಾಗ ಗುಡ್ಡ ಬೆಟ್ಟಗಳಿಂದ ಆವೃತವಾಗಿದೆ, ಬಾಬಾಬುಡನ್‌ಗಿರಿ, ಕಲ್ಲತ್ತಿಗಿರಿ, ಮುಳ್ಳಯ್ಯನಗಿರಿ, ಬಲ್ಲಳರಾಯನ ದುರ್ಗಾ, ಕುದುರೆಮುಖ ಹೀಗೆ ಹಲವು ಗಿರಿಶಿಖರಗಳಿರುವ ಇಲ್ಲಿ ಮುಳ್ಳಯ್ಯನಗಿರಿ ಜಿಲ್ಲೆಯಲ್ಲಿ ಮಾತ್ರವಲ್ಲದೆ, ರಾಜ್ಯದಲ್ಲಿಯೂ ಅತೀ ಎತ್ತರದ ಶಿಖರವಿರುವ ಹೆಗ್ಗಳಿಕೆ ಇದೆ.

ವಾರ್ಷಿಕವಾಗಿ ಸರಾಸರಿ 1928.10 ಮಿ.ಮೀ ಮಳೆಯಾಗುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೃದ್ಧವಾದ ಅನೇಕ ಅರಣ್ಯ ಪ್ರದೇಶಗಳು, ಅನೇಕ ರೀತಿಯ ಪ್ರಾಣಿ, ಪಕ್ಷಿಗಳು, ಹಣ್ಣು ಹಂಪಲುಗಳನ್ನು ಬೆಳೆಯುವ ತಾಣಗಳಿವೆ. ಅದ್ಭುತ ಗಿಡಮೂಲಿಕೆಗಳ ಆಗರವಾಗಿರುವ ಈ ಕಾಡುಗಳು ಪ್ರಕೃತಿ ಕೊಟ್ಟಿರುವ ಅಪೂರ್ವ ಸಂಪತ್ತು ಎಂದು ಹೇಳಬಹುದು.

ಒಟ್ಟು 7.201 ಚದರ ಕಿ.ಮಿ ವ್ಯಾಪ್ತಿ ಹೊಂದಿರುವ ಚಿಕ್ಕಮಗಳೂರು ಜಿಲ್ಲೆ 200489 ಹೆಕ್ಟೇರು ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಕರ್ನಾಟಕದ ಜಿಲ್ಲೆಗಳಲ್ಲಿ 11ನೇ ಸ್ಥಾನ ಪಡೆದಿರುವ ಜಿಲ್ಲೆಯಾಗಿದೆ. ನಡುಗಿಸುವ ಚಳಿಗಾಲ, ತಂಪಾದ ಬೇಸಿಗೆ, ಸತತವಾಗಿ ಸುರಿಯುವ ಮಳೆಗಾಲವಿರುವ ಚಿಕ್ಕಮಗಳೂರು ಕಾಫೀ ತೋಟಗಳಿಂದ ಬಹುಪ್ರಸಿದ್ಧಿ. ದೇಶದ 'ಕಾಫಿ ತೊಟ್ಟಿಲು' ಎನ್ನಿಸಿಕೊಂಡ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಕಾಫಿ ಬೆಳೆಗೆ ಸಂಬಂಧಿಸಿದ ಸಂಶೋಧನಾ ಕೇಂದ್ರವಾಗಿವೆ. ಇಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಹೆಸರಾಗಿರುವ ಕುದುರೆಮುಖ ದೇಶದಾದ್ಯಂತ ಹೆಸರು ಮಾಡಿರುವುದು ಕಂಡು ಬರುತ್ತದೆ.

ರಮ್ಯ ಪ್ರದೇಶಗಳ ಗಣಿಯಾಗಿರುವ ಚಿಕ್ಕಮಗಳೂರು ಜಿಲ್ಲೆ ಹತ್ತಾರು ಜಾತ್ರೆಗಳಿಗೂ ಹೆಸರುವಾಸಿಯಾಗಿದ್ದು, ಇದಕ್ಕೆ ಸಾಹಿತ್ಯ ಸಂಸ್ಕೃತಿಯಲ್ಲಿ ತನ್ನದೇ ಆದ ವೈಶಿಷ್ಟ್ಯವಿದೆ. ಪ್ರಸಿದ್ಧ ಕವಿ ರುದ್ರಭಟ್ಟ, ಸಾಹಿತಿ ಲಕ್ಷ್ಮೀಶ, ವಿದ್ವಾಂಸ ಎ.ಆರ್. ಕೃಷ್ಣಶಾಸ್ತ್ರಿ ಈ ಜಿಲ್ಲೆಯವರು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೆ.ವಿ ಪುಟ್ಟಣ್ಣ (ಕುವೆಂಪು) ಮತ್ತು ಅವರ ಮಗ ಕೆ.ಪಿ ಪೂರ್ಣಚಂದ್ರ ತೇಜಸ್ವಿ ಹುಟ್ಟಿದ್ದು ಬಹುಕಾಲ ನೆಲೆ ನಿಂತಿದ್ದು ಈ ನೆಲದಲ್ಲಿಯೇ. ಅಖಿಲ ಭಾರತ ಪ್ರಸಿದ್ಧಿ ಪಡೆದ ನೃತ್ಯಗಾರ್ತಿ ಡಾ|| ಕೆ. ವೆಂಕಟಲಕ್ಷ್ಮಮ್ಮ ಇದೇ ಜಿಲ್ಲೆಯವರಾಗಿದ್ದಾರೆ.

ಮನಮೋಹಕ ತಾಣಗಳನ್ನು ಹೊಂದಿರುವ ಇದು ಹಲವಾರು ಪ್ರೇಕ್ಷಣೀಯ ಸ್ಥಳಗಳ ಜಿಲ್ಲೆ. ಪ್ರಸಿದ್ಧ ಯಾತ್ರಾಕ್ಷೇತ್ರ ಶೃಂಗೇರಿ ಆದಿಶಂಕರರು ಸ್ಥಾಪಿಸಿದ ವಿದ್ಯಾಶಂಕರ ದೇಗುಲವಿರುವ ಸ್ಥಳ. ಪವಿತ್ರ ತುಂಗಾನದಿ ತೀರದಲ್ಲಿರುವ ಶೃಂಗೇರಿ ಶಾರದಾಂಬೆ ದೇವಾಲಯದಿಂದಲೂ ಹೆಸರುವಾಸಿಯಾಗಿದೆ.

ಚಿ ಕ್ಕಮಗಳೂರು ಸಮೀಪವಿರುವ ಬಾಬಾಬುಡನ್‌ಗಿರಿ ಹಾಗೂ ದತ್ತಾತ್ರೇಯ ಪೀಠ ಹಾಗೂ ಹಿಂದೂ–ಮುಸ್ಲೀಮರ ಭಕ್ತಿ, ಶ್ರದ್ಧಾ ಕೇಂದ್ರ. ಪಂಚಪೀಠಗಳಲ್ಲಿ ಬಾಳೆಹೊನ್ನೂರು ರಂಭಾಪುರಿ ಪೀಠ ಭದ್ರಾನದಿಯ ಎಡದಂಡೆಯಲ್ಲಿರುವ ಪ್ರಸಿದ್ಧ ಧಾರ್ಮಿಕ ಕ್ಷೇತ್ರ. ಅನ್ನಪೂರ್ಣೇಶ್ವರಿ ದೇವಾಲಯವಿರುವ ಹೊರನಾಡು ಜಿಲ್ಲೆಯ ಇನ್ನೊಂದು ಧಾರ್ಮಿಕ ತಾಣ. ಪುರಾಣ ಇತಿಹಾಸಗಳ ಸಂಗಮವಾದ ಬೆಳವಾಡಿಯ ಆಲಯ ಸಮುಚ್ಚಯ, ಅಮೃತಾಪುರದ ಆಕರ್ಷಕ ಅಮೃತೇಶ್ವರ ದೇವಾಲಯ, ಕಳಸದ ಕಳಸೇಶ್ವರ ದೇವಸ್ಥಾನ, ಶೃಂಗೇಶ್ವರ ಆಲಯ ಜಿಲ್ಲೆಯ ಕೆಲವು ಮುಖ್ಯ ಶ್ರದ್ಧಾ ಕೇಂದ್ರಗಳು. ಹೊಯ್ಸಳ ಸಾಮ್ರಾಜ್ಯದ ಮೂಲ ವ್ಯಕ್ತಿ ಹೊಯ್ಸಳ ಹುಟ್ಟಿದ ಅಂಗಡಿ ಬಹುಕಾಲ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಸ್ಥಳ. ಕೆಮ್ಮಣ್ಣು ಗುಂಡಿ ಕರ್ನಾಟಕದ ಪ್ರಸಿದ್ಧ ಗಿರಿಧಾಮ, ನಯನ ಮನೋಹರ ದೃಶ್ಯಗಳ ಸೃಷ್ಟಿ ಸ್ಥಳ ಕೆಮ್ಮಣ್ಣುಗುಂಡಿ ಕಾಡು, ಜಲಧಾರೆ, ಸಸ್ಯ ಶ್ಯಾಮಲೆ, ಗಿರಿಶ್ರೇಣಿ ಝರಿಗಳನ್ನು ಒಟ್ಟಿಗೆ ದರ್ಶನ ಮಾಡಿಸುವ ಅಪೂರ್ವ ಸ್ಥಳ.

ಭದ್ರಾ ಅಭಯಾರಣ್ಯ ಹುಲಿ, ಆನೆ, ಕಾಡೆಮ್ಮೆಗಳು ಯಥೇಚ್ಛವಾಗಿ ವಾಸಿಸುವ ನೈಸರ್ಗಿಕ ಅರಣ್ಯ ಮುಳ್ಳಯ್ಯನಗಿರಿ ಚಾರಣಾಸಕ್ತರಿಗೆ ಹೇಳಿ ಮಾಡಿಸಿದ ಸ್ಥಳ. ಕುದುರೆಮುಖ ಸಾಹಸಿಗಳನ್ನು ಕೈ ಬೀಸಿ ಕರೆಯುವ ಸುಂದರ ತಾಣ. ಪ್ರಕೃತಿರಮ್ಯ ಪ್ರದೇಶಗಳು, ಐತಿಹಾಸಿಕ ತಾಣಗಳು, ಶ್ರದ್ಧಾ ಕೇಂದ್ರಗಳು, ಕಣ್ಮನ ಸೆಳೆಯುವ ಜಲಪಾತ ಝರಿಗಳನ್ನು ಹೊಂದಿರುವ ಚಿಕ್ಕಮಗಳೂರು ಜಿಲ್ಲೆ ಪರ್ವತ ಶ್ರೇಣಿಗಳೇ ಅಲ್ಲದೆ, ವಿಶಾಲ ಬಯಲು ಪ್ರದೇಶಗಳನ್ನು ತನ್ನಲ್ಲಿಟ್ಟುಕೊಂಡ ಅಪರೂಪದ ಜಿಲ್ಲೆಯಾಗಿದೆ.



ಮನ್ವಿತ ಆರ್
ದ್ವಿತೀಯ ಪಿ.ಯು.ಸಿ, ಪಿ.ಸಿ.ಎಂ.ಬಿ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ



ಕಾವ್ಯೋಕ್ತಿ | ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವರಾರೋ? ಬೆಳಗೂ ಅದೆ! ಕತ್ತಲೆಯೂ ಅದೆ!! – ಅಲ್ಲಮಪ್ರಭು



ಕತೆ ಕತೆ ಕಾರಣ

# ಆ ದಿನಗಳಲ್ಲೊಂದು ದಿನ

ನಾನು ಆಗ ದ್ವಿತೀಯ ಪಿಯುಸಿಯಲ್ಲಿ ಓದುತ್ತಾ ಇದ್ದೆ. ಆ ದಿನಗಳಲ್ಲಿ ನನ್ನ ಅಕ್ಕನ ಮದುವೆಯಾಯಿತು. ಅಕ್ಕನ ಮದುವೆಯ ನಂತರ ಮನೆ ಸಮಸ್ಯೆ ಇದ್ದದರಿಂದ, ನನ್ನ ತಂದೆ ನನಗೆ ಓದನ್ನು ನಿಲ್ಲಿಸಲು ಹೇಳಿದರು. ಆದರೆ ಓದುವ ಹಂಬಲ, ಆದ್ದರಿಂದ ತಂದೆಯ ಮಾತಿಗೆ ಬೆಲೆ ಕೊಡದೆ ಓದು ಮುಂದುವರಿಸಿದೆ. ದ್ವಿತೀಯ ಪಿಯುಸಿಯಲ್ಲಿ ಒಳ್ಳೆ ಅಂಕ ಗಳಿಸಿದೆ. ನಂತರ ಮುಂದಿನ ಓದನ್ನು ಮುಂದುವರಿಸಿದೆ. ಆದರೆ ಆಗ ನನ್ನ ತಂದೆ ಧೃಢ ನಿರ್ಧಾರದಿಂದ ಹೇಳಿದರು, "ಲೋ ಶಿವು, ನೀನು ಓದಿದ್ದು ಸಾಕು ಇಲ್ಲಿ ಮನೆಕಡೆ ಕೆಲಸಮಾಡಿಕೊಂಡು ಇರು" ಆದರೆ ನನ್ನ ಮನಸು ಕೇಳಿಲಿಲ್ಲ, ಆದ್ದರಿಂದ ನಾನು ನನ್ನ ಮೂರು ಜನ ಗೆಳೆಯರು ಸೇರಿ ಮನೆ ಬಿಟ್ಟು ಕೆಲಸ ಹುಡುಕಿಕೊಂಡು ಬೇರೊಂದು ಊರಿಗೆ ಹೋದ್ವಿ. ಕೆಲಸ ಏನೋ ಸಿಕ್ತು ಆದರೆ ನಾವಂದುಕೊಂಡಷ್ಟಲ್ಲ.

ನಮಗೆಲ್ಲರಿಗೂ ಫರ್ಟಿಲೈಸರ್ಸ್ ಕಂಪೆನಿ ಯಲ್ಲಿ ಸೇಲ್ಸ್ ಮನ್ ಆಗಿ ಕೆಲಸ ಸಿಕ್ಕಿತ್ತು. ಅಲ್ಲಿನ ಸ್ಯಾಲರಿ ವಿಷಯ ಹೇಗೆ ಅಂದ್ರೆ ಒಂದು ಮನೆಯಿಂದ ಒಂದು ಆರ್ಡರ್ ಬಂದ್ರೆ ನೂರು ರೂಪಾಯಿಯ ಹಾಗೆ ದಿನದ ಖರ್ಚಿಗೆ ಇಬ್ಬರಿಂದ ನೂರು ರೂಪಾಯಿ ಕೊಡುತ್ತಾ ಇದ್ರು. ಬೆಳಗ್ಗೆ ತಿಂಡಿ, ಮಧ್ಯಾಹ್ನ ಊಟ ಹಾಗೂ ವಾಹನದ ಖರ್ಚಿಗೆ. ಇವತ್ತು ಕೆಲಸದ ಮೊದಲನೆಯ ದಿನ ನಾನು ನನ್ನ ಮತ್ತೊಬ್ಬ ಗೆಳೆಯ ಅವರು ಹೇಳಿದ ಜಾಗಕ್ಕೆ ಹೋಗಲು ಬಸ್ ನಿಲ್ದಾಣಕ್ಕೆ ಹೋದ್ವಿ. ಆದರೆ ಮೊದಲನೆಯ ದಿನವೇ ಒಂದು ಸಂಕಟಕ್ಕೆ ಒಳಗಾದ್ವಿ. ನನಗೆ ಮತ್ತು ನನ್ನ ಗೆಳಯನಿಗೆ ನಾವು ಹೋಗಬೇಕಾದ ಜಾಗದ ಹೆಸರು ನೆನಪಾಗಲಿಲ್ಲ. ನಾವು 2 ಗಂಟೆಗಳ ಕಾಲ ಬಸ್ ನಿಲ್ದಾಣದಲ್ಲೇ ಯೋಚಿಸುತ್ತಾ ಕುಳಿತಿದ್ವಿ, ನಂತರ ನೆನಪಾಯಿತು ಆ ಊರಿನ ಹೆಸರು ಪೆರಾಜೆ ಅಂತ.

ನಂತರ ಆ ಊರಿಗೆ ಹೋಗುವ ಬಸ್ಸನ್ನು ಹತ್ತಿ ಕೂತ್ವಿ. ಕಂಡೆಕ್ಟರ್ ಬಂದು 'ಎಲ್ಲಿಗೆ' ಕೇಳಿದಾಗ ಪೆರಾಜೆ ಎಂದ್ವಿ. "ಸರಿ ಒಬ್ಬರಿಗೆ 40 ರೂಪಾಯಿ ಕೊಡಿ" ಎಂದಾಗ ಒಮ್ಮೆಲೆ ಗಾಬರಿಯಾಯಿತು. ನಮ್ಮ ಬಳಿ ಇದ್ದದ್ದೇ 100 ರೂಪಾಯಿ. ಬಸ್ಸಿನ ಸಹವಾಸ ಬೇಡ ಎಂದು ಕೆಳಗೆ ಇಳಿದ್ವಿ. ನಂತರ ಅಲ್ಲೇ ಇದ್ದ ಒಬ್ಬ ವ್ಯಕ್ತಿಯ ಬಳಿ ಯಾವುದಾದರು ಪೆರಾಜೆಗೆ ಹೋಗುವ ವಾಹನ ಇದ್ಯಾ ಕೇಳಿದ್ವಿ. ಅವ್ರು 'ಹಾ' ಎಂದು ಒಂದು ಟ್ಯಾಕ್ಸಿಗೆ ಕೈ ಮಾಡಿ ಹೇಳಿದರು, "ಆ ಟ್ಯಾಕ್ಸಿಯಲ್ಲಿ ಹೋಗಿ ಅಂತ", ನಾವು ಸರಿ ಅಂತ ಹೇಳಿ ಹೋದ್ವಿ. ಆ ಗಾಡೀಲಿ ಜನ ನೋಡಿದ್ರೆ ಇನ್ನೊಬ್ಬ ಗಾಡಿಯೊಳಗೆ ಕೂತ್ರೂ ವಾಹನ ಚಾಲಕ ಹೊರ ಬೀಳ್ತಾನೆ ಆದ್ರು ಅದ್ರಲ್ಲೆ ಕೂತ್ವಿ. ಅವರೆಲ್ಲ ತುಳು ಜನರಾಗಿದ್ರು. ನಮ್ಮ ಹಣೆಬರಕ್ಕೆ ನಮಗೆ ತುಳು ಕೂಡ ಬರಲ್ಲ. ಬರಿ ಅವ್ರು ಕೇಳಿದಕ್ಕೆ 'ಅಂದು ಅಂದು' ಅಂತ ಮಾತ್ರ ಹೇಳ್ತಾ ಇದ್ವಿ. ಆ ಗಾಡಿಲಿ ಯಾರೋ ಒಬ್ರು "ನಿಕುಲು ಫಟ್ಟದಕುಲಾ?" "ಅಂದ್" ಹೀಗೆ ಆ ಊರು ಮುಟ್ಟಿದ್ವಿ. ಮೊದಲನೇ ದಿನ 25 ಆರ್ಡರ್ ಬಂದವು. ಅಂದರೆ ಎರಡು ಸಾವಿರದ ಐನೂರು ರೂಪಾಯಿ ಆ ದಿನದ ಸಂಬಳ. ಹೀಗೆ ದಿನ ಕಳೆದಂತೆ ಮಾಡುವ ಕೆಲಸದ ಮೇಲೆ ಜಿಗುಪ್ಸೆ ಬಂದಂತಾಯ್ತು. ಆದ್ದರಿಂದ ಅಲ್ಲೇ ಹತ್ತಿರದಲ್ಲಿರುವ ಗಣಪತಿ ದೇವಸ್ಥಾನಕ್ಕೆ ಹೋಗಿ ಬೆಳಗ್ಗಿನಿಂದ ಸಂಜೆ ತನಕ ಇದ್ದು, ನಂತರ ಮಾಲಿಕನಿಗೆ ಸುಳ್ಳು ಲೆಕ್ಕ ಕೊಡುತ್ತಾ ಇದ್ವಿ. ಈಗ ತಿಂಗಳ ಕೊನೆ ಹಂತ ಅಂದರೆ ಸಂಬಳ ಕೊಡುವ ಸಮಯ. ಈಗ ಹೀಗೆ ಮಾಡಿದರೆ 'ಸರಿ ಅಲ್ಲ' ಎಂದು ಮತ್ತೆ ಕೆಲಸಕ್ಕೆ ಹೋದ್ವಿ.

ಹೋಗಬೇಕಾದ ಊರು ಮುಟ್ಟಿದೆ. ಹೊಸ ಊರು, ಹೊಸ ಜಾಗ, ಹೊಸ ಜನ. ಏನು ತಿಳಿದಿರದ ಊರು ಹಾಗೇ ಮುಂದೆ ಹೋಗ್ತಾನೇ ಇದೀನಿ, ಒಂದು ಮನೆನೂ ಕಾಣಿಸ್ತಾ ಇಲ್ಲ. ಸುಮಾರು 8 ಕಿ.ಮೀ ಆದ್ರೂ ಒಂದು ಮನೇನೂ ಇಲ್ಲ. ಎಲ್ಲಿ ನೋಡಿದರಲ್ಲಿ ಕಾಡು, ಮರ, ಗಿಡ, ಪಕ್ಷಿ, ಗುಡ್ಡ ಹೀಗೆ ಒಂತರಾ ವಿಚಿತ್ರ. ಹೀಗೆ ಹೋಗಬೇಕಾದ್ರೆ ಗಾಡಿ ಹೋದ ಚಕ್ರದ ಗುರುತು ಕಾಣಿಸ್ತು. ಹಾಗೆ ಸ್ವಲ್ಪ ಧೈರ್ಯನೂ ಬಂತು. ಸ್ವಲ್ಪ ಸಮಯದ ನಂತರ ಒಂದು ಬೈಕ್ ಕಾಣಿಸ್ತು. ನಾನು ಅವರನ್ನು ಕೇಳಿದೆ, "ಇಲ್ಲಿ ಹತ್ರದಲ್ಲಿ ಮನೆ ಇದ್ಯಾ?" ಅಂತ. ಅವ್ರು "ಹಾ! ಮುಂದೆ ಸುಮಾರ ು ಮನೆಗಳಿದ್ದಾವೆ" ಎಂದು ಹೊರಟರು. ನಾನು ಹೋದೆ ಹೋದೆ ಏನೂ ಸಿಗಲಿಲ್ಲ, ಹತ್ರದಲ್ಲಿ ನದಿ ಹರಿಯುವ ಶಬ್ದ, ಅದರ ಬಳಿ ಹೋದರೆ ಯಾರೋ ಇಬ್ಬರು ಮನುಷ್ಯರು ಕಂಡರು. ನೋಡಲು ಭಯಂಕರವಾಗಿದ್ದಾರೆ, ಏನೋ ಮಾತಾಡುತ್ತಿದ್ದಾರೆ. ಅದೂ ತುಳುವಿನಲ್ಲಿ. ಅವರನ್ನು ನೋಡಿದರೆ ದೆವ್ವ ನೋಡಿದ ಹಾಗಿತ್ತು. ನನಗೆ ಭಯ ಆಯ್ತು ಆದ್ರು ಮುಂದೆ ಹೋದೆ, ನಂತರ ಅಜ್ಜಿ ಹೇಳಿದ್ದು ನೆನಪಾಯ್ತು "ಮೊಮ್ಮಗನೇ, ದೆವ್ವಗಳ ಕಾಲು ಮುಂದೆ-ಹಿಂದೆ ಇರುತ್ತೆ ಕಣೋ" ಅವರ ಕಾಲು ನೋಡಿದೆ ಸರಿಯೇ ಇತ್ತು. ನಂತರ ಅವರ ಬಳಿ ಹತ್ತಿರದಲ್ಲಿ ಮನೆ ಇದೆಯಾ? ಎಂದಾಗ ಅವರು ಹಾ ಇಲ್ಲೇ ಮುಂದೆ ಇದೆ ಅಂದ್ರು. ಮತ್ತೆ ನಾನು ಹೋದೆ. ಸುಮಾರು ಮನೆಗಳಿದ್ದವು. ಈ ದಿನ ಕೂಡ 25 ಆರ್ಡರ್ ಬಂದವು ಹಾಗೂ ಕೊನೆಯ ಒಂದು ಚಿಕ್ಕ ಮನೆ ಇತ್ತು. ಅದನ್ನ ಯಾಕೆ ಬಿಡೋದು ಎಂದು ಹೋದೆ. ಆಗ ನಂಗೆ ಒಂದು ಸತ್ಯ ತಿಳಿಯಿತು, ಆದೇನೆಂದರೆ ಹಳ್ಳಿಗಳಲ್ಲಿ ಚಿಕ್ಕ ಮನೆಯಿದ್ದರೆ ಅವರು ಬಡವರಲ್ಲ, ಅವರು ತೋಟ ಕಾಯಲು, ತೋಟದ ಒಳಗೆ ಇನ್ನೊಂದು ಪುಟ್ಟ ಮನೆ ಮಾಡಿರುತ್ತಾರೆಂದು. ನಾನು ಆ ಮನೆಗೆ ಹೋದೆ, ಆ ಮನೆಯಲ್ಲಿ ಇಬ್ಬರಿದ್ದರು. ಒಬ್ಬ ಮಗ ಹಾಗೂ ತಾಯಿ. ಆ ಹುಡುಗನ ತಾಯಿ ನನ್ನನ್ನು ನೋಡಿ, "ಬಾರಪ್ಪ, ಒಳಗೆ ಕೂತ್ಕೋ. ನನ್ನ ಮಗ ತೊಟಕ್ಕೆ ಹೋಗಿದ್ದಾನೆ ಇನ್ನೇನು ಬರುತ್ತಾನೆ, ನೋಡು ಬಂದೆ ಬಿಟ್ಟ." ನಂತರ ಆ ಮಹಿಳೆ ನನ್ನ ಬಳಿ, "ಊಟ ಮಾಡ್ತಿರಾ, ಮೀನಿನ ಪದಾರ್ಥ ಆಗುತ್ತೆ ಅಲ್ವಾ?" ಎಂದರು. ಹೇಗೋ ಮಧ್ಯಾಹ್ನ ಮೂರಾಗಿತ್ತು. "ಹಾ ಸರಿ" ಅಂದೆ. ಊಟ ಮಾಡ್ತಾ ಅವ್ರು ನನಗೊಂದು ಸತ್ಯ ಹೇಳಿದರು. "ನೋಡಪ್ಪ, ಇವನೇ ನನ್ನ ಮಗ, ಹಾಗೆ ಇಲ್ಲಿ ಸುಮಾರು ವರ್ಷದಿಂದ ಮೈನಿಂಗ್ ಆಗ್ತಾ ಇದೆ, ಅದು ಯಾವ ರೀತಿ ಅಂದ್ರೆ ಮೊದಲು ಒಬ್ಬ ಮಂತ್ರವಾದಿಯನ್ನು ಬಲಿ ಕೊಟ್ಟು ಎಲ್ಲಿ ಭೂಮಿಯನ್ನು ಅಗಿಯಬೇಕು ಅಂತ ನೋಡ್ತಾಯಿದ್ರು, ನೋಡಲಿ ನಾನು ಬೇಡ ಅಂತ ಹೇಳಲ್ಲ ಆದ್ರೆ ಮನುಷ್ಯರನ್ನು ಬಲಿಕೊಡೋದ್ಯಾಕೆ? ಅಷ್ಟೇ ಅಲ್ಲದೆ ಆ ಭೂಮಿಯನ್ನು 6 ಅಥವಾ 11 ಅಡಿ ಅಗೆದು , ಅದರ ಅಗಲವನ್ನೂ ಕೂಡ 6–11 ಅಷ್ಟೇ ಅಗಿತಾರೆ. ಹಾಗೆ ಆ ಗುಂಡಿಯೊಳಗೆ 10 ರಿಂದ 20 ವರ್ಷದವರನ್ನು ಕಳಿಸುತ್ತಾರೆ. ಏಕೆಂದರೆ ಆ ಗುಂಡಿಯೊಳಗೆ ಕುಳ್ಳಕ್ಕಿರುವವರು ಹೋಗಲು ಮಾತ್ರ ಸಾಧ್ಯ. ಆ ಗುಂಡಿಯೊಳಗೆ ಹೋಗಿ ಕೆಲಸ ಮಾಡಬೇಕಾದ್ರೆ ಆ ಮಣ್ಣು ಜಾರಿ ಆ ಮಕ್ಕಳ ಮೇಲೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾರೆ. ಈ ರೀತಿಯ ವಿಷಯವನೆಲ್ಲ ಮುಚ್ಚಿ ಹಾಕಿದ್ದಾರೆ. ಅಷ್ಟೇ ಅಲ್ಲಾ, ಈ ವಿಷಯವನ್ನು ಆ ಮಕ್ಕಳ ತಂದೆ ತಾಯಿಗೂ ಹೇಳೋದಿಲ್ಲ. ಆ ಮಕ್ಕಳಿಗೆ ಹಣದ ಆಸೆ ತೋರಿಸಿ ಕರೆದೊಯ್ಯುತ್ತಾರೆ. ಈಗ ನನ್ನ ಮಗ ಕೂಡ ಅದೇ ಕೆಲಸಕ್ಕೆ ಹೋಗ್ತಾ ಇದ್ದಾನೆ. ನನಗೆ ನನ್ನೋರು ಅಂತ ಇರೋದು ಇವನೊಬ್ಬನೆ ಕಣಪ್ಪ. ನನ್ನ ಗಂಡ ಕೂಡ ಈ ಕೆಲಸ ಮಾಡುವಾಗ ಪ್ರಾಣ ಕಳೆದುಕೊಂಡ. ನಾನು ಎಷ್ಟೇ ಹೇಳಿದ್ರು ಕೇಳ್ತಾ ಇಲ್ಲ. ನೀವಾದ್ರು ಹೇಳಿ" ಎಂದು ಕಣ್ಣೀರಿಟ್ಟರು. ನಾನು ಅವನಿಗೆ ಬುದ್ಧಿ ಹೇಳಿದ ನಂತರ ಅವನು ನಾನು ಇನ್ನು ಆ ಕೆಲಸ ಮಾಡಲ್ಲ ಎಂದು ಮಾತು ಕೊಟ್ಟ. ನಂತರ ದಿನಪತ್ರಿಕೆಯಲ್ಲಿ ಏನನ್ನೋ ನನ್ನ ಕೈಗೆ ಕೊಟ್ಟ, ನೋಡಿದರೆ ಹೊಳೆಯುವ ಕೆಂಪು ವಜ್ರ! "ಇದನ್ನು ನಾನು ಕದ್ದು ತಂದೆ, ಇದನ್ನು ನೀವೇ ಇಟ್ಟುಕೊಳ್ಳಿ" ಎಂದು ಹೇಳಿದ. ನಾನು ಮನೆಯಿಂದ ಹೊರಟೆ. ಆದರೆ ಹೋಗಬೇಕಾದರೆ ಯಾರೋ ನನ್ನ ಹಿಂದೆ ಬಂದ ಹಾಗೇ, ನನ್ನ ಜೋಬಿಗೆ ಕೈ ಹಾಕಿದಾಗೆ ಭಾಸವಾಗುತ್ತಿತ್ತು. ಗಳಿಗೆಗೊಮ್ಮೆ ಕಿಸೆ ಮುಟ್ಟಿ ನೋಡುತ್ತಾ ಇದ್ದೆ. ಮಧ್ಯದಲ್ಲಿ ಯಾರೋ ಸಿಕ್ಕರು, "ಯಾರ್ರಿ ನೀವು ಇಲ್ಲಿ ಏನ್ ಮಾಡ್ತಾ ಇದ್ದಿರಾ? ಈ ಜಾಗ ಸರಿ ಇಲ್ಲ. ಸೂರ್ಯ ಮುಳುಗಕ್ಕೂ ಮುನ್ನ ಮನೆ ಸೇರಿಕೊಳ್ಳಿ" ನಾನು ತುಂಬಾ ವೇಗವಾಗಿ ಚಲಿಸಿದೆ. ಅಂತು ಮನೆ ತಲುಪಿದೆ. ಎಲ್ಲು ಇಲ್ಲದ ಆನಂದ. ಆ ವಜ್ರವನ್ನು ಟಿಪಾಯಿಯ ಮೇಲಿಟ್ಟು ವಸ್ತ್ರ ಬದಲಿಸಿ ಬರಬೇಕಾದ್ರೆ ಮನೆ ಮಾಲಿಕರು ಆ ವಜ್ರಗಳನ್ನು ನೋಡುತ್ತಾ ನಿಂತಿದ್ದರು. ನಮ್ಮ ಮಾಲಿಕ ಒಮ್ಮೆಲೆ ನೂರೆಂಟು ಪ್ರಶ್ನೆ ಕೇಳಿದರು. ನಡೆದ ಕತೆ ಹೇಳಿದೆ. ನಂತರ ಅವ್ರು, "ಓ! ಸರಿ ಹಾಗಾದ್ರೆ ಈ ವಜ್ರ ನಂಗೆ ಕೊಡು" ಎಂದು ಹೇಳಿ ಅದನ್ನು ತೆಗೆದುಕೊಂಡು ಹೋದರು. ನನಗೆ ನಿರಾಸೆಯಾಯಿತು. ಮರು ದಿನ ಮತ್ತೆ ಕೆಲಸಕ್ಕೆ ಹೋದೆ. ಒಂದು ಮನೆ ಅದು ಗುಡ್ಡದ ಮೇಲೆ ತುದಿಯಲ್ಲಿದೆ. ಅಲ್ಲಿಗೆ ಹತ್ತಿ ಹೋದೆ. ಮನಸ್ಸಿನಲ್ಲಿ ಅಂದುಕೊಂಡೆ 'ಹೋ' ಇವರ ಮನೆಯಲ್ಲಿ ಕುಡಿಯೋಕೆ ಮಜ್ಜಿಗೆ ಕೊಡಬಹುದು ಅಂತ ಗುಡ್ಡವನ್ನು ಹತ್ತಿದೆ. ಆ ಮನೆಯ ಹತ್ರ ಯಾರೋ ಪೂಜೆ ಮಾಡುವವರು ಕಂಡ ಹಾಗೆ ಆಯ್ತು. ಹತ್ತಿರ ಹೋಗಿ ನೋಡಿದರೆ ಕಪ್ಪು ವಸ್ತ್ರ ಧರಿಸಿದ್ದಾರೆ. ನಾನು ಮಾಲೆ ಹಾಕಿರಬಹುದೇನೋ ಎಂದುಕೊಂಡೆ. ನಂತರ ಮನೆಯೊಳಗೆ ಕರೆದರು. ಅವರ ವೇಷ ವಿಚಿತ್ರ ಇತ್ತು. ಕೈಯಲ್ಲಿ ವಿಭೂತಿ ಹಣೆಯಲ್ಲಿ ಕುಂಕುಮ ನನಗೆ ಭಯ ಆಯ್ತು. ಆದ್ರು ಮನೆಯ ಒಳಗೆ ಹೋದೆ. ನಾನು ಕಾಲಿಡುತ್ತಿದ್ದಂತೆ ನನ್ನ ಮುಖದ ಮೇಲೆ ಆ ಮನೆಯೊಳಗಿಂದ ಕೆಂಪು ಬೆಳಕು ಹೊಳೆಯಿತು. ನಾನು ಸರಿಯಾಗಿ ಆ ಮನೆಯನ್ನು ನೋಡಿದೆ. ಎಲ್ಲಾ ಕಡೆಯೂ ಕಲಶ, ಬುರುಡೆ, ಮೂಳೆ, ನೋಡಿದ್ರೇ ಮಾಟಮಾಡುವವರ ಮನೆ. ನಾನು ಆ ಮನೆಯ ವಾತಾವರಣವನ್ನು ನೋಡಿದಾಗ ನನ್ನ ತಲೆ ತಿರುಗಿದಂತಾಯ್ತು. ಕಣ್ಣೆಲ್ಲ ಕಪ್ಪಾಯ್ತು ಎಲ್ಲಾ ಮರೆತಂತಾಯ್ತು. ನಂತರ ಅವರು ಒಳ್ಳೆಯ ಮನುಷ್ಯರ ಹಾಗೆ ಕಂಡರು ಮತ್ತು ಕುಡಿಯಲು ಏನಾದ್ರು ಬೇಕಾ ಅಂತ ಕೇಳಿದ್ರು, ಆದ್ರೆ ನಾನು ನನ್ನ ಪ್ರಾಣ ಉಳಿದ್ರೆ ಸಾಕು ಅಂತ ಅಲ್ಲಿಂದ ಓಡಿ ಹೊರ ಬಂದೆ.



ಎ.ಎನ್.ಅನನ್ಯ ಜೈನ್
ದ್ವಿತೀಯ ಪಿಯುಸಿ, ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

ಟೀಚರ್ಸ್ ಬಾಲ್ಕನಿ

## ಬದುಕು ಬವಣೆ

ಬಯಸಿದ್ದೆಲ್ಲ ಸಿಗಲು ಅದೇನು ಮಾರುಕಟ್ಟೆಯೇ
ಬಯಸದೇ ಬಂದದ್ದೆಲ್ಲ ಭಾಗ್ಯವಾಗಿರಲು
ಬರದುದನ್ನು ನಂಬಿ ಏಕೆ ಹಲುಬುವೆ
ಕಾಂಚಾಣ ರೌದ್ರ ನರ್ತನಕಿಲ್ಲಿ ಜಾಗ
ಬಿಡದ ಹಮ್ಮು, ಬರದ ಹೆಮ್ಮೆ
ಬಡವನಿಗೆ ಮಾತ್ರವೇ ಕಾನೂನು ರಿವಾಜು
ಸಮಾಜಕ್ಕಿಲ್ಲ ಹಿರಿಕಿರಿಯರೆಂಬ ಭೇದ
ಎಲ್ಲರನು ತನ್ನೊಳಗೆಳೆದು ಕೊಳ್ಳುವ ತವಕ
ಬದುಕು ದಾರಿ ದೀಪ, ಮನ ನಂದಾದೀಪ
ತೈಲ ಮುಕ್ತಾಯಕೆ ಮಸಣದ ಹಾದಿ
ಆಗ ತಲೆ ಬದಿಯಲ್ಲೊಂದು ಕಾಯಿ ಹೋಳು ದೀಪ
ಜೀವವಾರಿದ ಮೇಲೆ ಆ ದೀಪಕೆ ಬೆಲೆಯೇ?
ಹೊತ್ತು ಸಾಗಿದ್ದಾರೆ ನಾಲ್ಕು ಜನ ಹೆಣ ಭಾರ
ತಿಳಿದಿದೆ ಇನ್ನೆಂದೂ ಭೂಮಿಗೆ ಬಾರ
ಧರ್ಮಕಾಷ್ಠವನ್ನು ಕಷ್ಟದಲಿ ಚಿತೆಗೆಸೆದು
ಮನದೊಳಗೇ ಭಾವ-ಭಾಷ್ಪಾಂಜಲಿ
ಚಿರಕಾಲ ನೆನಪಿರುವ ಋಣ ಭಾರ
ಅದನ್ನೊತ್ತರಿಸಿ ಸಾಗಬೇಕು ಜಗ ಮುಂದೆ
ಪರಮ ಸುಖವೆಂದರೆ ಚರಮಗೀತೆಯೊಂದೇ
ಕಹಿ ಸತ್ಯ ಅರಿಯಬೇಕಾಗಿದೆ.



ರಾಮಕೃಷ್ಣ ಹೆಗಡೆ
ಕನ್ನಡ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ

## ಮಾತೃ ವಾತ್ಸಲ್ಯ

ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಹೆತ್ತ-ತಾಯಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದುದು. ಅರ್ಥಾತ್ ತಾಯಿಯ ಋಣ ಹಾಗೂ ಭೂಮಿ ತಾಯಿಯ ಋಣ ಈ ಜನ್ಮದಲ್ಲಿ ತೀರಿಸಲಾಗದು. ದುಡ್ಡು ಕೊಟ್ಟರೆ ಬೇಕಾದ್ದು ಸಿಗುತ್ತೈತೆ ಈ ಜಗದಲಿ ಕಾಣೋ... ಈ ಜಗತ್ತಿನಲ್ಲಿ ಹಣ ಎನ್ನುವ ವಸ್ತುವಿನಿಂದ ಏನನ್ನು ಬೇಕಾದರೂ ಖರೀದಿಸಬಹುದು. ಆದರೆ ಹಡೆದ ತಾಯಿಯನ್ನು ಕಳೆದು ಕೊಂಡರೆ ಮತ್ತೆ ನಮಗೆ ಮರಳಿ ಸಿಗುವುದು ಕನಸಿನ ಮಾತು. ತನ್ನೆಲ್ಲಾ ಸರ್ವಸ್ವವನ್ನೂ ಮಕ್ಕಳಿಗೋಸ್ಕರ ಧಾರೆ ಎರೆಯುವ ಜೀವಗಳು ಅಪ್ಪ ಮತ್ತು ಅಮ್ಮ. ಮಕ್ಕಳ ಲಾಲನೆ ಪಾಲನೆಯಿಂದ ಆರಂಭವಾಗಿ ವಿದ್ಯಾಭ್ಯಾಸ ಕೊಟ್ಟು ಸಮಾಜದಲ್ಲಿ ಸ್ವಾವಲಂಬಿಯಾಗಿ ಬದುಕಲು ಕಲಿಸುವ ಜೀವಗಳು ತಂದೆ ತಾಯಿಗಳು. ಸಂಸಾರದಿಂದ ಸಂಸ್ಕಾರದ ವರೆಗೂ ಜವಾಬ್ದಾರಿಯನ್ನು ಹೊತ್ತು, ನಿಷ್ಕಲ್ಮಶವಾದ ಪ್ರೀತಿಯನ್ನು ತೋರಿಸುವಲ್ಲಿ ಸದಾ ನಿರತರಾಗಿರುತ್ತಾರೆ. ಇಂದಿನ ಯಾಂತ್ರಿಕ ಜಗತ್ತಿನಲ್ಲಿ ಕೆಲವು ಯುವ ಪೀಳಿಗೆ ಅಪ್ಪ-ಅಮ್ಮನ ವಾತ್ಸಲ್ಯವನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಜಾನಪದ ಗೀತೆಯ ಸಾಲಿನಂತೆ, ಸೊಸೆ ಬಂದು ಒಂದ್ ವರುಷದಾಂಗೆ ತನ್ನ ಮಗ ದೂರವಾದ ಎಂದು ಆ ಮಹಾತಾಯಿ ನೋವಿನಿಂದ ಹಾಡುವ ಸಾಲುಗಳಿವು. ತನ್ನ ಮನದನ್ನೆ ಬಂದಾಗ ಸುಕ್ಕುಕಟ್ಟಿದ, ನಿಶ್ಯಕ್ತವಾದ ತಾಯಿಯ ದೇಹ ಮಗನಿಗೆ ಅಸಹ್ಯವಾಗುವಂತಹ ಸ್ಥಿತಿ ಎದುರಾಗುವುದು ನಾವಿಂದು ಕಾಣುತ್ತಿದ್ದೇವೆ. ಮುದಿ ತಂದೆ-ತಾಯಿಯನ್ನು ಅನಾಥ ಆಶ್ರಮದಲ್ಲಿ ಬಿಟ್ಟು ಮನೆಯಲ್ಲಿ ಐಶಾರಾಮಿ ಜೀವನ ನಡೆಸುವ ಮಕ್ಕಳು ಅದೇಷ್ಟೋ ಕಾಣಸಿಗುತ್ತಾರೆ. ಈ ಅಂಶಗಳನ್ನು ಗಮನಿಸುವಾಗ ನನಗೊಂದು ಕಥೆ ನೆನಪಾಗುತ್ತದೆ. ಒಂದು ಬಡ ತಾಯಿ ಆ ತಾಯಿಗೆ ಒಬ್ಬ ಮಗ. ಕೂಲಿ ನಾಲಿ ಮಾಡಿ ಮಗನನ್ನು ಸಾಕುತ್ತಿದ್ದಳು. ಒಮ್ಮೆ ಮಗ ಆಟವಾಡುತ್ತಿದ್ದಾಗ ಕಣ್ಣಿಗೆ ಕಲ್ಲು ತಾಗಿ ಕಣ್ಣುಗಳನ್ನು ಕಳೆದುಕೊಳ್ಳುತ್ತಾನೆ. ಮಗನ ಭವಿಷ್ಯತ್ತಿಗಾಗಿ ತಾಯಿ ತನ್ನ ಒಂದು ಕಣ್ಣನ್ನು ಮಗನಿಗೆ ದಾನವಾಗಿ ನೀಡಿದ್ದಳು. ಆದರೆ ಈ ವಿಷಯ ಮಗನಿಗೆ ತಿಳಿದಿರಲಿಲ್ಲ. ತನ್ನ ಮಗನನ್ನು ಒಬ್ಬ ಶ್ರೇಷ್ಠ ವ್ಯಕ್ತಿಯನ್ನಾಗಿ ಮಾಡಿಸಬೇಕೆಂದು ಕೂಲಿ ಮಾಡಿ ಓದಿಸುತ್ತಿದ್ದಳು. ಒಮ್ಮೆ ಶಾಲೆಯಲ್ಲಿ ಯಾವುದೋ ಕಾರ್ಯಕ್ರಮವಾದಾಗ ತಾಯಿ ಮಗ ಓದುವ ಶಾಲೆಗೆ ಕೂಲಿ ಕೆಲಸಕ್ಕೆ ಬಂದಿದ್ದಳು. ಇದನ್ನು ನೋಡಿ ಮಗ ತಾಯಿಗೆ ಬೇಕಾಬಿಟ್ಟಿ ಬೈದು, ಹೀಯಾಳಿಸಿ, ಕಣ್ಣಿಲ್ಲದ ನಿನ್ನನ್ನು ನೋಡಲು ಅಸಹ್ಯವಾಗುತ್ತದೆ, ನನ್ನ ಗೆಳೆಯರ ಎದುರು ನಿನ್ನನ್ನು ನೋಡುವಾಗ ನನಗೆ ಮುಜುಗರವಾಗುತ್ತದೆ ನನ್ನ ಕಣ್ಣೆದುರು ಇನ್ನು ನೀನು ಕಂಡರೆ ನಾನು ಜೀವಂತ ಉಳಿಯುವುದಿಲ್ಲ ಎಂದೆಲ್ಲಾ ಬೈದು ತಾಯಿಯನ್ನು ಅಲ್ಲಿಂದ ಓಡಿಸಿಯೇ ಬಿಟ್ಟ. ದಿನ ಕಳೆಯಿತು ಮಗ ಎಂದಿನಂತೆ ಮನೆಗೆ ಬಂದ, ಮನೆಯಲ್ಲಿ ತಾಯಿ ಕಾಣಸಿಗಲಿಲ್ಲ. ಅಕ್ಕ-ಪಕ್ಕದ ಮನೆಯವರನ್ನೆಲ್ಲಾ ಕೇಳಿದ. ಆಗ ಪಕ್ಕದ ಮನೆಯ ಮುದುಕ ಈ ಹುಡುಗನಿಗೆ ತಾಯಿ ಪಟ್ಟ ಕಷ್ಟವನ್ನು ಹಾಗೂ ಆಕೆ ಮಗನಿಗೆ ಕಣ್ಣನ್ನು ದಾನವಾಗಿ ನೀಡಿದ ವಿಷಯ ತಿಳಿಸಿದ. ಮಗನ ಕಣ್ಣಲ್ಲಿ ನೀರು ಬರಲಾರಂಭಿಸಿತು. ತಾಯಿಯನ್ನು ಹುಡುಕಲಾರಂಭಿಸಿದ. ಊರಿನ ಬಸ್ ಸ್ಟ್ಯಾಂಡ್ ನಲ್ಲಿ ತನ್ನ ಹಳೆಯ ಬಟ್ಟೆಯೊಂದಿಗೆ ಮಲಗಿದ್ದ ತಾಯಿಯನ್ನು ಬಿಗಿದಪ್ಪಿ ಕ್ಷಮೆಯಾಚಿಸಿ ಮನೆಗೆ ಕರೆತಂದು ಜೀವನ ಪೂರ್ತಿ ತಾಯಿಯನ್ನು ಚೆನ್ನಾಗಿ ನೋಡಿಕೊಂಡ. ಹೀಗೆ ನಮ್ಮ ನೋವಿಗೆ ಮಿಡಿಯುವ ಜೀವ ತಾಯಿ ಮಾತ್ರ, ಕಣ್ಣಿಗೆ ಕಾಣುವ ದೇವರು ತಾಯಿ ಮಾತ್ರ. ಆಸ್ತಿಗೋಸ್ಕರ, ಪ್ರತಿಷ್ಠೆಗೋಸ್ಕರ, ಹಣಕ್ಕೋಸ್ಕರ ಹಡೆದವರಿಗೆ ನೋವು ನೀಡಿ ಅವರನ್ನು ದೂರ ಮಾಡಿಕೊಳ್ಳುವುದು ಎಷ್ಟು ಸರಿ?





ಉಮೇಶ್ ಕೆ
ಅರ್ಥಶಾಸ್ತ್ರ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ

ಕಾವ್ಯೋಕ್ತಿ | ಸ್ವಾತಂತ್ರ್ಯವೆಮ್ಮುಸಿರು – ಉಸಿರಾಡಲೆಡೆಯಿಲ್ಲ – ಜಿ.ಪಿ. ರಾಜರತ್ನಂ



Advt.

# ARVIND MOTORS PVT. LTD.

TATA MOTORS

## TATA MOTORS COMMERCIAL DEALER

| | | |
|---|---|---|
| Padukodi, Kuloor-Kavoor Road, Mangalore - 575 013<br>Ph.: 0824-2455308, 2452308 | Wharf Road, Karwar - 581 301<br>Ph.: 08382 - 221379 | NH 66, Yettinabail Village, Mirjan, Kumta (n K) - 581 440<br>Ph.: 08386273017 |
| N.H.66, Vaderhobli, Kundapura - 576201<br>Ph.: 08254-231719 | N.H.66, Near ICO Petrol Pump, Udyavara, Udupi- 574118<br>Ph: 0820-2533708 | Near Mayura Theatre, Main Road, Puttur<br>Tel.: 08251-238467 |
| Race Course Road, Madikeri - 571201<br>Tel.: 08272 - 228171 | Near Devarayapatna Railway Over Bridge B.M. Road<br>Hassan - 573 201. Tel.: 08172-256279 | Mallandur Road, Chikmagalur - 577 101<br>Tel : 08262 - 236477, 230977 |
| Opp. Apmc Yard, N.H. 206, B.H. Road, Kadur - 577548<br>Ph: 08267 - 221030, 222894 | B.H. Road, Shimoga - 577 201<br>Ph.: 08182-222255, 223521 | No 10/1-1, Cauvery Senet, Ragavendra Extension<br>Tumkur Road, Near Yeshwanthpur Metro Station<br>Bangalore - 560022 Ph.: 080-40060685/86/89 |
| #65(B) LII Phase, Peenya Industrial Area, Bangalore - 560058<br>Ph: 080-28391863, 28395872, 41171439 | No. 186, Kumbalagod, Ramohalli (post),<br>Big Banian Tree Road, Kengeri Hobli, Bangalore - 560074 | #626, 17/1g2 & 17/1h2, Gankal Village, Near Kanakadasa Circle<br>Uttarahalli Road, Banashankri 6th Phase Layout<br>11th Block Kengeri Hobli, Bangalore - 562109 |




THE FASTEST GROWING STATIONERY BRAND
NORD
NOTEBOOKS & STATIONERY
KING SIZE NOTE BOOK
sbcstore.in
DOWNLOAD THE APP NOW
Browse Items
NORD STATIONERY

Advt.